ಕೊಡಬೇಕು ಎಂದು ಹಣಕಾಸಿನ ಇಲಾಖೆಗೆ ತಿಳಿಸಿದ್ದಾರೆ. ಹನ್ನೆರಡುವರೆ ಗಂಟೆಯಲ್ಲಿ ತಮ್ಮ ಆಫೀಸಿನಿಂದ ಈ ವಿಷಯ ಗೊತ್ತಾದ ಕೂಡಲೇ ಸೂಕ್ತ ಕ್ರಮ ಕೈಕೊಂಡಿದ್ದೇವೆ. ಈ ವಿಷಯವನ್ನು ಗಮನದಲ್ಲಿಟ್ಟು ಅತಿ ಶೀಘ್ರವಾಗಿ ಎರಡು ಮೂರು ದಿವಸಗಳಲ್ಲಿ ಅನುದಾನವನ್ನು ಕೊಡಲು ವ್ಯವಸ್ಥೆ ಮಾಡುತ್ತೇವೆ. ಹಣಕಾಸಿನ ಇಲಾಖೆಯವರು ಕೆಲವು ಕ್ವೆರೀಸ್ ಹಾಕಿ ಎಕ್ಸಪ್ಲೆನೇಷನ್ ಕೇಳಿದ್ದರು. ಅದನ್ನು ನೋಡಿ ಉತ್ತರ ಕೊಟ್ಟೀದ್ದೇವೆ. ಎರಡು ಮೂರು ದಿನಗಳಲ್ಲಿ ಹಣ ಕೊಡುತ್ತೇವೆ.

SUPPLEMENTARY DEMANDS FOR GRANTS FOR 1973-74.

Demand Nos. 3, 6, 10, 13, 16, 18, 20A, 23, 24, 24A, 25, 27, 30B, 34, 38, 39, 40, 41, 44, 55, 46, 48, 52 and 54.

Demand No. 3—State Excise

Sri M. Y. GHORPADE (Minister for Finance).—Madam Speaker, on the recommendation of the Governor, I beg to move :—

That a further sum not exceeding Rs. 7,90,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of Demand No. 3 'State Excise'.

Madam SPEAKER.—Motia moved :

"That a further sum not exceeding Rs. 7,90,000 be granted out of the Consolidated Fund of the State to defray charges which will come in course of payment during the year ending the 31st day of March 1974, in respect of Demand No. 3—'State Excise".

Along with this Demand and other Demands are deemed to have been moved and opened for discussion.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಸನ್ಮಾನ್ಯ ಸಭಾಧ್ಯಕ್ಷಣಿಯರೇ, ಸಭೆಯ ಮುಂದೆ ಮಾನ್ಯ ಅರ್ಥ ಸಚಿವರು ಸಪ್ಲಿಮೆಂಟರಿ ಡಿಮ್ಯಾಂಡ್ ಏನಿಟ್ಟಿದ್ದಾರೆ. ಅದರ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಮೊದಲನೆಯದಾಗಿ ಪ್ರತಿಯೊಂದು ಅಧಿವೇಶನವಾದಾಗಲೂ ಈ ರೀತಿ ಸಪ್ಲಿಮೆಂಟರಿ ಡಿಮ್ಯಾಂಡನ್ನು ಇಡುತ್ತಲೇ ಇರುವರು. ಈ ರೀತಿ ಮಾಡುವುದು ಸರಿಯಲ್ಲ, ನ್ಯಾಯವಲ್ಲ, ಇದು ಪ್ರಗತಿದಾಯಕವಾದ ವ್ಯವಹಾರವಲ್ಲ. ಎಷ್ಟು ಖರ್ಚು ಮಾಡುತ್ತೇವೆಂಬ ಅಭಿಪ್ರಾಯ ಆದಷ್ಟು ಮಟ್ಟಿಗೆ ಮೊದಲೇ ಇರಬೇಕು. ಯೋಜಿತ ರೀತಿಯಲ್ಲಿ ಖರ್ಚು ಮಾಡದೆ ಈ ರೀತಿ ಆಗಾಗ್ಗೆ ಇಷ್ಟು ಖರ್ಚು ಮಾಡಿದ್ದೇವೆ, ಕೊಡಿ ಎಂದು ಹೀಗೆ ಹೇಳುವುದು ಸರಿಯಲ್ಲ. ಇದು ಸಮರ್ಪಕವಾದ ಪದ್ಧತಿಯಲ್ಲ ಎಂದು ಆಗಾಗ್ಗೆ ಟೀಕೆ ಮಾಡುತ್ತಲೇ ಇದ್ದೇವೆ. ಅನೇಕ ವೇಳೆ ಟೀಕೆಗಳಿಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಹಿಂದಿದ್ದ ಮಂತ್ರಿಗಳೂ ಕೂಡ ವಿಧಿ ಇಲ್ಲದೆ ಕೆಲವು ಸಂದರ್ಭಗಳಲ್ಲಿ ಖರ್ಚು ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ಪದ್ಧತಿಯನ್ನು ಬದಲಾಯಿಸುವರು ಎಂದಿದ್ದೆ. ಹಾಗೆ ಘೋರ್ಪಡೆಯವರು ಮಾಡದಿರುವುದರಿಂದ ಮೊದಲು ವ್ಯಸನವನ್ನು ವ್ಯಕ್ತಮಾಡಬೇಕಾಗಿದೆ.

ಇನ್ನು ಕೆಲವು ಮುಖ್ಯ ವಿಷಯಗಳನ್ನು ಗಮನಕ್ಕೆ ತರುತ್ತೇನೆ. ಜನತಾ ಗೃಹ ನಿರ್ಮಾಣ ಯೋಜನೆ ಏನಿದೆ. ಅದಕ್ಕೆ ಬೇಕಾದ ಹಣವನ್ನು ಈಗ ಕೇಳಿದ್ದಾರೆ. ಬಜೆಟ್ ಮೇಲೆ ಭಾಷಣ ಮಾಡುತ್ತಾ ಜನತಾ ಗೃಹ ನಿರ್ಮಾಣ ಯೋಜನೆಗೆ ಎರಡೂವರೆ ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದ್ದಾರೆ.

ಅವರು ಹೇಳಿದ್ದು ಏನೆಂದರೆ, ಹೊಸ ಮನೆಗಳನ್ನು ಕಟ್ಟಿಸುವುದಕ್ಕಲ್ಲ. ಹೋದ ಬಡ್ಜೆಟ್ ಅಧಿವೇಶನದಲ್ಲಿ ೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇವತ್ತಿನ ದಿವಸ ೧೪ ಸಾವಿರ ಮನೆಗಳನ್ನು

ಕಟ್ಟಬೇಕಾಗಿದೆ. ಅದನ್ನು ಮುಂದುವರೆಸುವುದಕ್ಕೋಸ್ಕರ ಎರಡೂವರೆ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ ಎಂದು ಹೇಳಿದರು. ಹೊಸ ಮನೆಗಳು ಬರುವ ಪರಿಸ್ಥಿತಿ ಇಲ್ಲ. ಕಟ್ಟಿಸುತ್ತಾ ಇರುವ ಮನೆಗಳಿಗೆ ಖರ್ಚಾಗುವ ಪರಿಸ್ಥಿತಿ ಬರುತ್ತಾಇದೆ. ಇದೇಕೆ ಹೀಗಾಯಿತು ? ಯೋಜನೆಯಲ್ಲಿ ತಪ್ಪಿರಬೇಕು. ಕಾರ್ಯಕ್ರಮ ಕಾರ್ಯಗತ ಮಾಡುವುದರಲ್ಲಿ ತಪ್ಪಿರಬೇಕು. ಅಧಿಕಾರಿಗಳಲ್ಲಿ ತಪ್ಪಿರಬೇಕು. ಮತ್ತು ಇನ್ನ್ಯಾವುದಾದರೂ ಕಾರಣಗಳು ಇರಬಹುದು. ನನಗೆ ಗೊತ್ತಿಲ್ಲ. ಇದಕ್ಕೆ ಒಂದು ಸ್ಪಷ್ಟವಾದ ಉತ್ತರವನ್ನು ನಾವು ನಿರೀಕ್ಷಿಸುತ್ತೇವೆ.

ಶ್ರೀ ಎಂ. ವೈ. ಘೋರ್ಪಡೆ :—ಇದರಲ್ಲಿ ಸೇರಿರತಕ್ಕದ್ದು ೭೫ ಲಕ್ಷ ರೂಪಾಯಿಗಳ ಡಿಮ್ಯಾಂಡ್ ಇದೆ. ಇದು ಹೊಸ ಡಿಮ್ಯಾಂಡ್ ಅಲ್ಲ. ಜನತಾ ಹೌಸಿಂಗ್ ಪ್ರೋಗ್ರಾಂನ್ನು ಪಿ. ಡಬ್ಲ್ಯು. ಡಿ. ಮಾಡಬೇಕಾಗಿತ್ತು. ಕಮ್ಯುನಿಟಿ ಡೆವಲಪ್‌ಮೆಂಟ್ ವತಿಯಿಂದ ಮಾಡಿಸಿರುವುದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಹೊಸ ಡಿಮ್ಯಾಂಡ್ ಅಲ್ಲ. ಹೊಸದಾಗಿ ದುಡ್ಡು ಪಡೆಯುತ್ತಾ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—ಮಾನ್ಯ ಸಚಿವರು ಕೊಟ್ಟಂಥ ವಿವರಣೆ ಒಪ್ಪಿಕೊಂಡರೂ, ಈ ಪ್ರಶ್ನೆಯನ್ನು ನಾನು ಆ ದೃಷ್ಟಿಯಿಂದ ನೋಡುತ್ತಾ ಇಲ್ಲ. ಹೊಸ ಡಿಮ್ಯಾಂಡ್ ಕೇಳುತ್ತಿದ್ದಾರೆ ಎಂದು ನಾನು ಹೇಳಲಿಲ್ಲ. ನೀವು ಹೊಸ ಮನೆಗಳನ್ನು ಕಟ್ಟಿಸುವಂಥ ಯೋಜನೆಗಳನ್ನು ಕೈ ಬಿಟ್ಟಿದ್ದೀರಿ ಎಂದು ನನ್ನ ಆರೋಪಣೆ. ಕೈ ಬಿಟ್ಟಿಲ್ಲ ಮುಂದೆ ನೋಡುತ್ತೇವೆ ಎಂದು ನೀವು ಹೇಳಬಹುದು. ಕಟ್ಟಿಸುತ್ತಾ ಇರುವ ಮನೆಗಳಿಗೇ ಮತ್ತೆ ಖರ್ಚುಮಾಡುವ ಪರಿಸ್ಥಿತಿಯಲ್ಲಿದ್ದರೆ. ಹೊಸ ಮನೆಗಳನ್ನು ಕಟ್ಟಿಸುವಂಥ ಪರಿಸ್ಥಿತಿ ಇಲ್ಲ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇನ್ನೊಂದು ವಿಷಯ ಏನೆಂದರೆ, ಇದುವರೆಗೆ ಪಿ. ಡಬ್ಲ್ಯು. ಡಿ. ಈ ಕೆಲಸ ಮಾಡುತ್ತಿತ್ತು. ಈಗ ಕಮ್ಯುನಿಟಿ ಡೆವಲಪ್‌ಮೆಂಟ್ ವತಿಯಿಂದ ಮಾಡಬೇಕು ಎಂದು ಹೇಳುತ್ತೀರಿ. ಕಮ್ಯುನಿಟಿ ಡೆವಲಪ್‌ಮೆಂಟ್ ಇಲಾಖೆ ಈ ಕೆಲಸವನ್ನು ಸಮರ್ಪಕವಾಗಿ ಮಾಡುತ್ತದೋ ಇಲ್ಲವೋ ಕಾದುನೋಡಬೇಕಾಗಿದೆ. ಅದನ್ನು ತಕ್ಷಣ ಹೇಳುವುದಕ್ಕೆ ಸಾಧ್ಯವಿಲ್ಲ. ಕಮ್ಯುನಿಟಿ ಡೆವಲಪ್‌ಮೆಂಟ್ ಚೆನ್ನಾಗಿಮಾಡುತ್ತದೆ. ಪಿ. ಡಬ್ಲ್ಯು. ಡಿ. ಚೆನ್ನಾಗಿ ಮಾಡಲಿಲ್ಲ, ಎಂದು ಆ ದೃಷ್ಟಿಯಿಂದ ಕಮ್ಯುನಿಟಿ ಡೆವಲಪ್‌ಮೆಂಟ್‌ಗೆ ಕೊಟ್ಟರೋ ಅಥವಾ ಕಮ್ಯುನಿಟಿ ಡೆವಲಪ್‌ಮೆಂಟ್ ಇವತ್ತಿನ ದಿವಸ ಬೇರೆ ಜನರ ಸಹಕಾರ ಪಡೆದು ಮಾಡುವುದಕ್ಕೆ ಮುಂದೆ ಬರುತ್ತಿದೆ ಎನ್ನುವ ದೃಷ್ಟಿಯಿಂದ ಕೊಟ್ಟರೋ ನನಗೆ ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಇದರಿಂದಾಗಿ, ಕಂಟ್ರಾಕ್ಟರ್ಸ್ ಕೈವಾಡ ಜಾಸ್ತಿಯಾಗುತ್ತದೆ. ಅಧಿಕಾರಿಗಳ ಕೈವಾಡ ಜಾಸ್ತಿಯಾಗುತ್ತದೆ ಎನ್ನುವ ಅನುಮಾನಕ್ಕೆ ಅವಕಾಶವಾಗುತ್ತದೆ. ಅನುಮಾನಕ್ಕೆ ಅವಕಾಶವಾಗುವ ಸ್ಥಿತಿಯನ್ನು ಈ ಡಿಮ್ಯಾಂಡ್‌ನಲ್ಲಿ ತಂದೊಡ್ಡಿದ್ದೀರಿ ಎಂದು ನನಗನ್ನಿಸುತ್ತದೆ. ಇನ್ನೊಂದು ಹೇಳಬೇಕು. ಏನೆಂದರೆ, ಜನತಾ ಗೃಹ ನಿರ್ಮಾಣ ಯೋಜನೆ ಪ್ರಕಾರ ೨,೫೦೦ ರೂಪಾಯಿ ಒಂದು ಮನೆಗೆ ಖರ್ಚಾಗುತ್ತದೆ. ಯಾರಿಗೆ ಮನೆ ಕೊಡುತ್ತೀರಿ. ಅವನು ೫೦೦ ರೂಪಾಯಿ ಶ್ರಮದಾನ ಮಾಡಬೇಕು ಎಂದು ಹೇಳಲಾಗಿದೆ. ಈ ೫೦೦ ರೂಪಾಯಿ ಶ್ರಮದಾನ ಯಾರು ಮಾಡುವುದು ಎನ್ನುವ ಪ್ರಶ್ನೆ ಬಂದಾಗ, ವಾಸ್ತವವಾಗಿ ಹಲವಾರು ಕಡೆಗಳಲ್ಲಿ ಕಾರ್ಮಿಕರು, ಕೂಲಿ ಮಾಡುವವರು, ಕೂಲಿ ಪಡೆಯದೆ ಅವರು ಕೆಲಸಮಾಡಬೇಕು. ೫೦೦ ರೂಪಾಯಿ ಕೆಲಸ ಎಂದರೆ, ದಿನಕ್ಕೆ ೩ ರೂಪಾಯಿ ಎಂದು ಲೆಕ್ಕ ಹಾಕಿದರೂ ತಿಂಗಳಿಗೆ ೯೦ ರೂಪಾಯಿ ಆಗುತ್ತದೆ. ೬ ತಿಂಗಳು ಕಾಲ ಆ ರೀತಿ ಕೆಲಸ ಮಾಡಬೇಕು. ಕಮ್ಯುನಿಟಿ ಡೆವಲಪ್‌ಮೆಂಟ್‌ನಿಂದಾಗಲಿ, ಪಿ. ಡಬ್ಲ್ಯು. ಡಿ. ಡಿಪಾರ್ಟ್‌ಮೆಂಟ್‌ನಿಂದಾಗಲಿ ತನ್ನ ಸಂಸಾರ ನಿರ್ವಹಣೆಗೆ ಯಾವ ರೀತಿಯಾದ ಪರಿಹಾರವನ್ನೂ ಪಡೆಯದೆ ೬ ತಿಂಗಳು ಕಾಲ ಕೆಲಸಮಾಡಬೇಕು ಎಂಬ ಮುಖ್ಯ ಸಮಸ್ಯೆ ಬಂದು ನಿಂತಿದೆ. ಇದರಿಂದಾಗಿ ನೌಕರರು ಮುಂದೆ ಬರುವುದಕ್ಕೆ ಹಿಂಜರಿಯುತ್ತಾರೆ. ಇದು ಬಡವರಿಗೆ ಕಟ್ಟಿ ಕೊಡುವ ಮನೆಯೇ ? ಈ ರೀತಿ ಯೋಜನೆ ಏಕೆ ತೆಗೆದುಕೊಂಡು ಬರುತ್ತೀರಿ ? ಪಕ್ಕದ ನೆರೆ ರಾಜ್ಯವಾದ ಕೇರಳದಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಈಗಾಗಲೇ ೫೦,೦೦೦ ಮನೆಗಳು ಆಗಿವೆಯೆಂದು ತಿಳಿದು ಬಂದಿದೆ. ಅಲ್ಲಿ ಒಂದೊಂದು ಪಂಚಾಯಿತಿ ಇಷ್ಟಿಷ್ಟು ಮನೆಗಳನ್ನು ಕಟ್ಟಿಸಬೇಕು ಎಂದು ತೀರ್ಮಾನ ಮಾಡಿದ್ದಾರೆ. ಒಂದೊಂದು ತಾಲ್ಲೂಕಿಗೆ ನೂರು ನೂರು ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಒಂದು ಲಕ್ಷ ಮನೆಗಳಲ್ಲಿ ೫೦ ಪರ್ಸೆಂಟ್ ಮುಫತ್ತಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಕೊಡಬೇಕು. ಮಿಕ್ಕದ್ದು ಬೇರೆಯವರಿಗೆ ಕೊಡಬೇಕು ಎಂದು ಹೇಳಿದ್ದಾರೆ. ೫೦೦ ರೂಪಾಯಿ ಶ್ರಮದಾನ ಮಾಡಬೇಕು ಎಂದು ಹೇಳಲಿಲ್ಲ. ಪಂಚಾಯಿತಿಗಳು, ಮಹಿಳಾಮಂಡಲಿಗಳು, ಯುವಕ ಮಂಡಲಿಗಳು, ಎಲ್ಲಾ ಸಂಸ್ಥೆಗಳವರು ಸಾಮುದಾಯಿಕವಾಗಿ ಸೇರಿ ಶ್ರಮದಾನ ಮಾಡುತ್ತಾರೆ. ಅಲ್ಲಿ ಅವರಿಗೆ ಗಂಜಿಕೊಡುತ್ತಾರೆ. ಆದುದರಿಂದ ಮನೆಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗಿದೆ. ವೇಗವಾಗಿ ಕಟ್ಟಿಸುವುದಕ್ಕೆ ಸಾಧ್ಯವಾಗಿದೆ. ಇಲ್ಲಿ ಅಂಥ ಪರಿಸ್ಥಿತಿ ಬಂದಿಲ್ಲ. ನೀವು ೫೦೦ ರೂಪಾಯಿ ಶ್ರಮದಾನ ಕೇಳುತ್ತೀರಿ. ನನಗೇನು ಕಂಡುಬರುತ್ತದೆ ಎಂದರೆ ಕೆಲಸಮಾಡುವುದೂ ಕಷ್ಟ, ಸಂಸಾರ ನಿರ್ವಹಣೆ ಮಾಡುವುದೂ ಕಷ್ಟ, ಆದ್ದರಿಂದ ಮನೆಗಳನ್ನು ಕಟ್ಟಿಸುವುದು ದುಸ್ಸಾಧ್ಯವಾಗುತ್ತದೆ. ಯಾವ ಬಡವರಿಗೆ

ಮನೆಗಳನ್ನು ಕಟ್ಟುವುದಕ್ಕೆ ಯೋಜನೆ ಮಾಡಿದ್ದೀರೋ, ಅವರಿಗೆ ಮನೆಗಳು ಸಿಗದೇ ಇರುವ ಪರಿಸ್ಥಿತಿ ಬರುತ್ತದೆ. ನನ್ನ ಸೂಚನೆ ಏನೆಂದರೆ, ೫೦೦ ರೂಪಾಯಿ ಏನು ಇಟ್ಟಿದ್ದಿರಿ, ಅದನ್ನು ಸಾಲದ ರೂಪವಾಗಿ ಕೊಟ್ಟು, ಸಾಲ ಕೊಡುವ ಹಾಗೆ ಮಾಡಿ, ಅವನ ಮನೆ ಕಟ್ಟಿದ ಮೇಲೆ ಅಕ್ಯುಪೆನ್ಸಿರೈಟ್ ಕೊಟ್ಟು, ಕಂತಿನ ಮೂಲಕ ೨೦ ವರ್ಷದಲ್ಲಿ ೫೦೦ ರೂಪಾಯಿ ಕೊಡುವ ಹಾಗೆ ಮಾಡಿದರೆ, ಆಗ ಶ್ರಮದಾನ ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ, ಮನೆಯಾದರೂ ಸಿಗುತ್ತದೆ. ಬೇರೆ ಕಡೆ ಹುಡುಕಿಕೊಂಡು ಹೋಗುವ ಪರಿಸ್ಥಿತಿಯಾಗಲೀ, ಕಷ್ಟ ಪಡುವ ಪರಿಸ್ಥಿತಿಯಾಗಲೀ ಬರುವುದಿಲ್ಲ. ಇದನ್ನು ಸರ್ಕಾರದವರು ಗಮನಿಸ ಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಇನ್ನೊಂದು ಪ್ರಶ್ನೆ ಏನೆಂದರೆ, ಜಮೀನನ್ನು ಅವನಿಗೇ ಕೊಡುತ್ತೇವೆ, ಮನೆಯನ್ನೂ ಸಹ ಅವನಿಗೇ ಕೊಡುತ್ತೇವೆ ಎಂದು ಹೇಳುತ್ತೀರಿ. ಬಹಳ ಒಳ್ಳೆಯದು. ಈ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮನೆ ಮತ್ತು ಸೈಟ್ ಅವನಿಗೇ ಸಿಕ್ಕಿದರೆ ಸಂತೋಷ. ಮನೆ ಮತ್ತು ಸೈಟ್ ಸಿಗದೆ, ಪರಭಾರೆಯಾಗುವಂಥ ಸನ್ನಿವೇಶಗಳು ಇವತ್ತಿನ ದಿವಸದ ಆರ್ಥಿಕಪರಿಸ್ಥಿತಿಯಲ್ಲಿದೆ ಎನ್ನುವುದನ್ನು ಮರೆಯುವ ಹಾಗಿಲ್ಲ. ಈಗ ಕಡುಬಡವರಿಗೆ ಸಾಲಸೋಲಗಳಿರುವುದರಿಂದ ಮನೆಯನ್ನು ಬೇರೆಯವರಿಗೆ ಕೊಟ್ಟು ಅವನೂ ಇರುವುದಿಲ್ಲ, ಮನೆಯೂ ಇರುವುದಿಲ್ಲ, ಈ ತರಹ ಪರಿಸ್ಥಿತಿ ನಡೆದಿದೆ. ಬೆಂಗಳೂರು ನಗರದಲ್ಲೂ ಕೂಡ ಇದೇ ಪರಿಸ್ಥಿತಿ ಬಂದಿದೆ. ಮನೆಯನ್ನು ಬೇರೆಯವರಿಗೆ ಕೊಡುತ್ತಾರೆ. ತಾವೂ ಇರುವದಿಲ್ಲ. ಸೈಟ್ ತೆಗೆದುಕೊಂಡು ಇನ್ನೊಬ್ಬರಿಗೆ ಕೊಡುತ್ತಾರೆ. ಈ ವ್ಯವಹಾರ ನಡೆಯುತ್ತಿದೆ. ಆದುದರಿಂದ ಅವರು ಬೇರೆಯವರಿಗೆ ಮಾರದೇ ಇರುವುದಕ್ಕೆ ಅಧಿಕಾರವಿಲ್ಲದ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ತೆಗೆದುಕೊಂಡಿಲ್ಲ. ಈ ಒಂದು ಸಂಶಯ ಇದೆ. ಈ ಸಂಶಯ ನಿವಾರಣೆ ಮಾಡಿದರೆ ಒಪ್ಪಿಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಒಟ್ಟಾರೆ, ಈ ಗೃಹನಿರ್ಮಾಣ ಯೋಜನೆಯಲ್ಲಿ ಜನಗಳನ್ನು ಎಷ್ಟು ಬೇಗ ಇನ್‌ವಾಲ್ ಮಾಡುತ್ತೀರೋ, ಅಷ್ಟು ಬೇಗ ಗೃಹನಿರ್ಮಾಣ ಆಗುವುದಕ್ಕೆ ಸಾಧ್ಯವಿದೆ. ಜನತೆ, ಜನತೆಯ ಸಂಘಸಂಸ್ಥೆಗಳು ಪೂರ್ತಿ ಯಾಗಿ ಇದರಲ್ಲಿ ಇನ್‌ವಾಲ್ವ್ ಆದರೆ ಮಾತ್ರ ಕಟ್ಟಡಗಳನ್ನು ಕಟ್ಟಲಿಕ್ಕೆ ಸಾಧ್ಯವಾಗುತ್ತದೆ. ಕಮ್ಯುನಿಟಿ ಡೆವಲಪ್‌ಮೆಂಟ್ ಆಗಲೀ, ಪಿ. ಡಬ್ಲ್ಯು. ಡಿ. ಆಗಲೀ, ಬೇರೆ ಡಿಪಾರ್ಟ್‌ಮೆಂಟ್ ಆಗಲೀ, ಜನತೆಯ ಸಂಪರ್ಕವಿಲ್ಲದೆ ಕೆಲಸಮಾಡುವ ಪರಿಸ್ಥಿತಿ ಇಲ್ಲ. ತಮಗೆ ಗೊತ್ತಿರಬಹುದು, ಕೇರಳದಲ್ಲಿ ವಿ. ವಿ. ಗಿರಿಯವರು ಶ್ಲಾಘಿಸಿದರು. ಅಲ್ಲಿನ ಸರ್ಕಾರ ಎಲ್ಲರನ್ನೂ ಸಹಾಯಮಾಡಿ ಎಂದು ಕೇಳಿಕೊಂಡಿದೆ. ಯಾರು ಟೈಲ್ಸ್ ಫ್ಯಾಕ್ಟರಿ ಇಟ್ಟಿದ್ದಾರೆ, ಅವರು ಟೈಲ್ಸ್‌ಕೊಟ್ಟಿದ್ದಾರೆ. ಅರಣ್ಯ ಮಂತ್ರಿಗಳು, ಟಿಂಬರನ್ನು ಕಡಿಮೆ ಬೆಲೆಗೆ ಅಥವಾ ಬೆಲೆ ಇಲ್ಲದೆ ಇದಕ್ಕೋಸ್ಕರ ಕೊಟ್ಟಿದ್ದಾರೆ. ದೊಡ್ಡ ದೊಡ್ಡ ಲಾರಿ ಇಟ್ಟುಕೊಂಡಿರುವವರು ನೂರಾರು ಜನ ಲಾರಿಗಳನ್ನು ಮುಫತ್ತಾಗಿ ಸಾಮಾನುಗಳನ್ನು ಸಾಗಿಸುವುದಕ್ಕೆ ಕೊಟ್ಟಿದ್ದಾರೆ. ಮಹಿಳಾ ಮಂಡಲಿಗಳು, ಯುವಕ ಮಂಡಲಿಗಳು ಸೇರಿ ಶ್ರಮದಾನ ಮಾಡುತ್ತಾರೆ. ಅಷ್ಟೇ ಅಲ್ಲ ಷೆಡ್ಯೂಲ್ಡ್ ಬ್ಯಾಂಕ್‌ನವರು ಸಾಲ ಕೊಟ್ಟು, ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಉದಾಹರಣೆಗೆ ಹೇಳಬೇಕು ಎಂದರೆ, ಮಂಜೇಶ್ವರದಲ್ಲಿ ೧೦ ಮನೆಗಳನ್ನು ಪಂಚಾಯಿತಿಯವರು ಕಟ್ಟಿಸಿದ್ದಾರೆ. ಸಿಂಡಿಕೇಟ್ ಬ್ಯಾಂಕ್‌ನವರು ನಾವು ಮನೆಯನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಪಂಚಾಯಿತಿಯಿಂದ ಒಂದು ಮನೆ ಕಟ್ಟಿಸಿಕೊಡುತ್ತಾರೆ. ಷೆಡ್ಯೂಲ್ಡ್ ಬ್ಯಾಂಕ್ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡುವುದಕ್ಕೆ ಮುಂದೆ ಬಂದಿದೆ ಎನ್ನುವುದನ್ನು ಇವತ್ತು ನಾವು ಕೇಳುತ್ತಿದ್ದೇವೆ. ಆ ರೀತಿ ಪ್ರಯತ್ನ ಆ ದಿಸೆಯಲ್ಲಿ ಎಲ್ಲಿಯೂ ನಡೆದಿಲ್ಲ. ಪ್ರಗತಿ ಕುಂಠಿತವಾಗಿದೆ. ಅದು ಕುಂಠಿತವಾಗಕೂಡದು. ಈ ಕೆಲಸ ಬೃಹತ್ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ನಡೆಯಬೇಕು. ಬಡವರಿಗೆ ಮನೆಗಳು ಅವಶ್ಯಕವಾದುದು. ಜನಗಳ ಸಹಕಾರ, ಷೆಡ್ಯೂಲ್ಡ್ ಬ್ಯಾಂಕುಗಳ ಸಹಕಾರ ಮತ್ತು ಸಾರ್ವಜನಿಕ ಸಂಸ್ಥೆಗಳ ಸಹಕಾರ ತೆಗೆದುಕೊಂಡು ಎಲ್ಲರೂ ಸೇರಿ ಯೋಜನೆಗಳು ಮಾಡುವ ರೀತಿಯಲ್ಲಿ ಕಾರ್ಯ ಪ್ರವೃತ್ತಿ ಮಾಡಬೇಕು. ಈ ದಿಸೆಯಲ್ಲಿ ಸರ್ಕಾರ ಹೋಗಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರೀತಿ ಮಾಡದೇ ಹೋದರೆ ಯೋಜನೆ ಕುಂಠಿತವಾಗುತ್ತದೆ. ಇನ್ನೊಂದು ಸಾರಿ ಹಣಕಾಸಿನ ಮಂತ್ರಿಗಳು ಬಡ್ಜೆಟ್ ಭಾಷಣ ಮಾಡುವಾಗ ಎರಡೂವರೆ ಕೋಟಿ ರೂಪಾಯಿ ಇರುವುದನ್ನು ಒಂದುಕಾಲು ಕೋಟಿ ರೂಪಾಯಿಗೆ ಇಳಿಸು ವಂಥ ಪರಿಸ್ಥಿತಿ ಬರುತ್ತದೆ. ಆ ರೀತಿ ಆಗಕೂಡದು ಎಂದು ನನ್ನ ಅಭಿಪ್ರಾಯ. ಇನ್ನು ಒಂದು ಅತಿ ಮುಖ್ಯವಾದಂಥ ಅಂಶ ಏನು ಎಂದರೆ ಅರ್ಧ ಮಿಲಿಯ ಜನರಿಗೆ ಕೆಲಸ ಕೊಡುವುದಕ್ಕೋಸ್ಕರ ಇಲ್ಲಿ ಸಪ್ಲಿಮೆಂಟರಿ ಗ್ರಾಂಟು ಕೇಳಿದ್ದಾರೆ. ನೋಡಲಿಕ್ಕೆ ಈ ಯೋಜನೆ ಬಹಳ ಚೆನ್ನಾಗಿ ಕಾಣುತ್ತದೆ. ಅದರಲ್ಲಿ ಏನು ಭಿನ್ನಾಭಿಪ್ರಾಯವಿಲ್ಲ. ನಿರುದ್ಯೋಗ ಸಮಸ್ಯೆ ಬಹಳ ಬೃಹದಾಕಾರವಾದ ಸಮಸ್ಯೆ, ದೇಶದಲ್ಲಿರುವ ಬಾರಿ ದೊಡ್ಡ ಸಮಸ್ಯೆ. ಈ ಸಮಸ್ಯೆಗೆ ಕಾರಣ ಯಾರು ? ಈ ಸಮಸ್ಯೆಗೆ ಕಾರಣ ಸರ್ಕಾರ, ಮತ್ತು ಸರ್ಕಾರದ ನೀತಿ ಎಲ್ಲಿಯವರೆಗೆ ಬಂಡವಾಳ ಶಾಹಿ ಸಮಾಜ ಇರುತ್ತದೆಯೋ ಅಲ್ಲಿಯವರೆಗೆ ಎಷ್ಟು ತಿಪ್ಪರಲಾಗ ಹಾಕಿದರೂ ಈ ನಿರುದ್ಯೋಗ ಸಮಸ್ಯೆ ಬಿಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಐಡಿಯಾಜಿಕಲ್ ವಿಚಾರ ತೆಗೆದುಕೊಂಡು ಬರುತ್ತೀರಿ. ಎಂದು ಹೇಳಬಹುದು. ಆದರೆ ಐಡಿಯಾಲಿಜಿ ಇರಬೇಕು. ಕಮಿಟಮೆಂಟ

ಕೂಡ ಇರಬೇಕು. ಆದುದರಿಂದ ಇವೊತ್ತಿನ ದಿವಸ ನೀವು ಹಾಕಿರತಕ್ಕ ಸ್ಕೀಮಿನಿಂದ ಮುಂದೆ ಹೋಗುವುದಕ್ಕೆ ಸಾಧ್ಯವೇ ಎಂದು ತಿಳಿದುಕೊಳ್ಳಬೇಕಾಗಿದೆ. ನೀವು ಹೋಗುವ ದಾರಿಯಿಂದ ಇದನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಈ ಅರ್ಧ ಮಿಲಿಯನ್ ಜಾಬುಗಳು ಯಾರಿಗಾಗಿ ಸೃಷ್ಟಿ ಮಾಡುತ್ತಿರುವುದು. ಇಂಜಿನಿಯರ ಯಾರು ಇದ್ದಾರೆ, ಅಂತಹವರಿಗೆ ಬ್ಯಾಂಕುಗಳು ಸಾಲ ಕೊಡುತ್ತವೆ, ಅವರು ಹಣ ಹಾಕಬೇಕು, ಅವರಿಗೆ ಲೋನ್ ಕೊಡುತ್ತಾರೆ. ಆಮೇಲೆ ಅವರಿಗೆ ಷಡ್ ಮತ್ತು ಇತರ ಅನುಕೂಲ ಮಾಡಿಕೊಡುತ್ತಾರೆ, ಮಷಿನರಿ ಕೊಡುತ್ತಾರೆ. ಅದೆಲ್ಲ ಕೊಟ್ಟ ಮೇಲೆ ಅವರು ಸಾಮಗ್ರಿಗಳನ್ನು ತಯಾರು ಮಾಡಬೇಕು. ಸಾಮಗ್ರಿಗಳನ್ನು ತಯಾರು ಮಾಡಿ ಅದನ್ನು ಮಾರಾಟ ಮಾಡಿ ಸಂಪಾದಿಸಬೇಕು.

Sri AZEEZ SAIT:—Training also will be given.

ಶ್ರೀ ಎಂ. ಎಸ್. ಕೃಷ್ಣನ್:—ಟ್ರೇನಿಂಗ್ ಪ್ರಶ್ನೆ ಬರುವುದಿಲ್ಲ. The only man who has got money can do it. Can a person who has not got money get a shed or machinery or loan? Has he got any money first of all to put in?

ಶ್ರೀ ಅಜೀಜ ಸೇಠ:—ಸ್ಕೀಂ ನೋಡಿದರೆ ಟೀಕೆ ಮಾಡುವ ಅವಶ್ಯಕತೆ ಬರುವುದಿಲ್ಲ. Many of them will be encouraged to take up industries of their own.

Sri M. S. KRISHNAN:—With due respect to my friend Sri Azeez Sait, the position is not so simple as he says. You have made it so complicated that an ordinary man cannot get money. Man with influence and with some financial background can get money. In addition to this he should be an Engineering Graduate.

Sri AZEEZ SAIT:—Definitely not.

ಶ್ರೀ ಎಂ. ಎಸ್. ಕೃಷ್ಣನ್:—ನಿಮ್ಮಂಥವರು ಹೇಳಿ ಹೇಳಿ ದೇಶ ಹಾಳಾಗಿ ಹೋಯಿತು. ನಿಮ್ಮದು ಒಂದು ತರಹ ಕುದುರೆ. ಒಂದೇ ಕಡೆ ನೋಡುತ್ತದೆ ವಿನಾ ಬೇರೆ ಕಡೆ ನೋಡುವುದಕ್ಕಾಗುವುದಿಲ್ಲ. ಸೋಲುತ್ತಾ ಬರುತ್ತದೆ. ಸಂಕೇಶ್ವರದಲ್ಲಿ, ಮೈಸೂರಿನಲ್ಲಿ ಎನು ಆಯಿತು? ಬಿಹಾರ, ಗುಜರಾತ ಕಡೆ ಸ್ವಲ್ಪ ನೋಡಿ.

ಶ್ರೀ ಅಜೀಜ ಸೇಠ:—ಸೋಲು ಗೆಲುವು ಇದ್ದೇ ಇದೆ. We must take it sportively.

ಶ್ರೀ ಎಂ. ಎಸ್. ಕೃಷ್ಣನ್:—ಇವರಿಗೆ ಏನು ಬರುತ್ತದೆ? ಏನೂ ಬರುವುದಿಲ್ಲ. ಮಂತ್ರಿಗಳು ಆಗುವುದಕ್ಕೆ ಲಾಯಕ್ಕಿಲ್ಲ ಎಂದು ಕಳುಹಿಸಿ ಬಿಟ್ಟರು.

ಶ್ರೀ ಎಚ್. ಸಿದ್ಧವೀರಪ್ಪ:—ಲಾಯಕ್ಕಿಲ್ಲ ಎಂದು ಎಲ್ಲಿ ಹೇಳಿದ್ದಾರೆ?

ಶ್ರೀ ಎಂ. ಎಸ್. ಕೃಷ್ಣನ್:—ನಿಮಗೆ ಏನು ಬರುತ್ತದೆ?

ಶ್ರೀ ಎಂ. ಎಸ್. ಕೃಷ್ಣನ್:—ಜನ ನೋಡುತ್ತಾರೆ ಇವರು ಈ ರೀತಿಯಲ್ಲಿ ಮಾತನಾಡುತ್ತಾ ಇರಲಿ ನಾಳೆ ಚರ್ಮ ಸುಲಿಯುವ ಕಾಲ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:—ಮೈಸೂರಿನಲ್ಲಿ ಇವರು ಸೋತರೆ ಒಂದು ಸಾವಿರ ರೂಪಾಯಿ ಕೊಡುತ್ತೇನೆ ಎಂದು ಬೆಟ್ ಕಟ್ಟಿದ್ದರು. ಒಂದು ಸಾವಿರ ರೂಪಾಯಿ ಕೊಟ್ಟಿಲ್ಲ.

ಅಧ್ಯಕ್ಷರು:—ನನ್ನ ಮುಂದೆ ಯಾರು ಬೆಟ್ ಕಟ್ಟಿಲ್ಲ!

ಶ್ರೀ ಎಂ. ಎಸ್. ಕೃಷ್ಣನ್:—ಅರ್ಧ ಮಿಲಿಯನ್ ಜಾಬು ಯಾರಿಗೆ ಸೇರಬೇಕೋ ಯಾರು ಉಪಯೋಗ ಪಡೆಯುವುದಕ್ಕೆ ಸಾಧ್ಯ ಆಗಬೇಕೋ ಅವರು ಉಪಯೋಗ ಪಡೆಯುವುದಕ್ಕೆ ಸಾಧ್ಯತೆ ಆಗದೆ ಇರುವ ರೀತಿಯಲ್ಲಿ ಈ ಯೋಜನೆ ಇದೆ. ಕಾರ್ಮಿಕನ ಮಗ ಇಂಜಿನಿಯರಿಂಗ್ ಡಿಗ್ರಿ ಪಾಸ ಮಾಡಿದ್ದರೆ ಅವನು ಬಂದು ಅನುಕೂಲಗಳನ್ನು ಕಲ್ಪಿಸಿಕೊಡು ಎಂದರೆ ಸಾಧ್ಯವಿಲ್ಲದ ಮಾತು. ಅಷ್ಟೇ ಅಲ್ಲ ಸೆಲ್ಫ ಜನರೇಟಿಂಗ

ಎಂಪ್ಲಾಯಮೆಂಟ ಬಗ್ಗೆ ಯೋಚನೆ ಮಾಡಿ ಆದರಿಂದ ನಮಗೆ ೩೦ ಸಹಸ್ರ ಜನಕ್ಕೆ ಕೆಲಸ ಸಿಗುತ್ತದೆ ಎಂದು ತಾವು-ಹೇಳುವುದು ಸರಿಯಾದುದು ಅಲ್ಲ ಎಂದು ನನ್ನ ಅಭಿಪ್ರಾಯ. ನನಗೆ ತಿಳಿದ ಮಟ್ಟಿಗೆ ಉದ್ಯೋಗ ಅವಕಾಶ ಜಾಸ್ತಿ ಮಾಡಬೇಕಾದರೆ ಯಾವುದೇ ಸರ್ಕಾರವಾಗಲಿ ಎರಡು ಕೆಲಸ ಮಾಡಬೇಕು. ಒಂದು ಬೃಹದಾಕಾರವಾಗಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಬೆಳೆಸುವುದು, ಇನ್ನೊಂದು ರೈತರು ಜಮೀನುಗಳನ್ನು ಬಿಟ್ಟು ನಗರಗಳಿಗೆ ವಲಸೆ ಬರುತ್ತಾರೆ. ಆ ರೀತಿ ವಲಸೆ ಬರುವುದನ್ನು ತಪ್ಪಿಸಿ ಗ್ರಾಮಗಳಲ್ಲಿ ಆದಷ್ಟು ಮಟ್ಟಿಗೆ ಗೃಹ ಕೈಗಾರಿಕೆಗಳನ್ನು ಮತ್ತು ಇತರ ಅನುಕೂಲಗಳನ್ನು ಅವರಿಗೆ ಕಲ್ಪಿಸಿಕೊಡುವುದು. ಈ ಎರಡು ಜವಾಬ್ದಾರಿಗಳನ್ನು ನಿರ್ವಹಿಸಿದರೆ ಈ ನಿರುದ್ಯೋಗ ಸಮಸ್ಯೆ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದಕ್ಕೆ ಸಾಧ್ಯ ಇಲ್ಲದಿದ್ದರೆ ಇದನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ.

೩ ನೆಯದು ಸರ್ಕಾರಿ ವಲಯದ ಕೈಗಾರಿಕೆಯೊಳಗೆ ಲೇಬರ ಇನ್‌ಸೆಂಟೀವ್ ಇರಬೇಕು. ಇದರಲ್ಲಿ ಎರಡು ತರಹವಿದೆ. ಕ್ಯಾಪಿಟಲ್ ಇನ್‌ಸೆನ್‌ಟೀವ್, ಲೇಬರ್ ಇನ್‌ಸೆಂಟೀವ್, ಕಾರ್ಮಿಕರಿಗೆ ಹೆಚ್ಚು ಉದ್ಯೋಗ ಅವಕಾಶ ಮಾಡಿಕೊಡುವ ಕೈಗಾರಿಕೆಗಳು ಬಂದರೆ ಮಾತ್ರ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಕೈಗಾರಿಕೆಗಳು ಬರುವ ದೃಷ್ಟಿಯಿಂದ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ನನಗೆ ತಿಳಿದ ಮಟ್ಟಿಗೆ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಾಗಿ ಇಟ್ಟ ಹಣ ೫೦ಕೋಟಿ ಚಿಲ್ಲರೆ. ಈ ರೀತಿ ಇರಬೇಕಾದರೆ ನಿಜವಾದ ಮಾತು ಬೇರೆ, ಇದು ಕನಸಾಗುತ್ತದೆಯೇ ವಿನಹ ನನಸಾಗುವುದಿಲ್ಲ. $\frac{1}{2}$ ಮಿಲಿಯನ್ ಜಾಬ್ ಒದಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳಬೇಕಾಗಿದೆ. ಒಂದು ಎಚ್ಚರಿಕೆ ಕೊಡಬೇಕಾಗಿದೆ ಏನೆಂದರೆ ಯಾರು ಕೈಗಾರಿಕೆ ಪ್ರಾರಂಭ ಮಾಡುತ್ತಾರೆ ಆ ಕೈಗಾರಿಕೆಗಳು ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ತರಹ ಆಗುತ್ತದೆ. ಸಣ್ಣ ಕೈಗಾರಿಕೆ ಎಂದರೆ ರಾ ಮೆಟೀರಿಯಲ್ಸ್ ಪ್ರಶ್ನೆ ಬರುತ್ತದೆ. ರಾ ಮೆಟೀರಿಯಲ್ಸ್ ಇವತ್ತಿನ ದಿವಸ ಯಾವ ರೀತಿ ಕೊಡುತ್ತೀರಿ ? ಯಾರಿಗೆ ಕೊಡುತ್ತೀರಿ ? ಹೇಗೆ ಕೊಡುತ್ತೀರಿ ಎಂಬುದೇ ಗೊತ್ತಾಗುವುದಿಲ್ಲ. ಇನ್ನೊಂದು ಡಿಮ್ಯಾಂಡ್ ಇದೆ ಷೆಡ್ಸ್ ಕೊಡುವುದು. ಈ ಎರಡೂ ಡಿಮ್ಯಾಂಡನ್ನು ಕ್ಲಬ್ ಮಾಡಿ ನೋಡಿದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನವರು ಭಾರಿ ತೊಂದರೆಗೆ ಒಳಗಾಗುತ್ತಿದ್ದಾರೆ. ಅವರಿಗೆ ಎಲೆಕ್ಟ್ರಿಕ್ ಸಿಟಿ ಸರಿಯಾಗಿ ಕೊಡುವುದಿಲ್ಲ, ಸರಿಯಾಗಿ ಸಾಲ ಕೊಡುವುದಿಲ್ಲ, ಸರಿಯಾಗಿ ರಾ ಮೆಟೀರಿಯಲ್ಸ್ ಸಿಕ್ಕುವುದಿಲ್ಲ, ರಾ ಮೆಟೀರಿಯಲ್ಸ್ ಕೊಡುತ್ತೇವೆಂದು ಹೇಳುತ್ತಾರೆಯೇ ವಿನಹಃ ಸಿಕ್ಕುವುದಿಲ್ಲ. ಎಲೆಕ್ಟ್ರಿಸಿಟಿ ಪಡೆಯಬೇಕಾದರೆ, ಕೈಗಾರಿಕೆಗೆ ಬೇಕಾಗುವ ಮತ್ತಿತರ ವಸ್ತುಗಳನ್ನು ಪಡೆಯಬೇಕಾದರೆ ಅಲ್ಲಿ ಮೊದಲು ದುಡ್ಡು ಕೊಡಲೇಬೇಕಾಗುತ್ತದೆ. ಲಂಚ ಕೊಡಬೇಕಾಗಿ ಬರುತ್ತದೆ. ಈ ರೀತಿಯ ಲಂಚಕೋರತನ ಕೈಗಾರಿಕಾ ಡಿಪಾರ್ಟಮೆಂಟಿನಲ್ಲಿ ಇದೆ. ಬೇಕಾದಷ್ಟು ಜನ ಗೋಳು ಇಟ್ಟುಕೊಳ್ಳುತ್ತಿದ್ದಾರೆ. ಈ ತರಹ ಪರಿಸ್ಥಿತಿ ಇರಬೇಕಾದರೆ, self generating employment $\frac{1}{2}$ ಮಿಲಿಯನ್ ಜಾಬ್ ಸ್ಕೀಮ್ ಏನು ಇದೆ. ಅದರಲ್ಲಿ ಅವರಿಗೆ ನಿಜವಾಗಿ ಉದ್ಯೋಗ ಸಿಕ್ಕುತ್ತದೆಯೇ, ಅವರಿಗೆ ಕೆಲಸ ಸಿಕ್ಕಿ ಅನುಕೂಲವಾಗುತ್ತದೆಯೇ, ಕೈಗಾರಿಕೆ ನಡೆಸುವುದಕ್ಕಾದರೂ ಸಹ ಬೇಕಾದಷ್ಟು ರಾ ಮೆಟೀರಿಯಲ್ಸ್ ಸಿಕ್ಕುತ್ತದೆಯೇ _ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಆದರಿಂದ ಈ ಸೆಲ್ಫ್ ಜನರೇಟಿಂಗ್ ಎಂಪ್ಲಾಯಮೆಂಟ್ ವಿಷಯದಲ್ಲಿ ತೀವ್ರವಾಗಿ ಯೋಚನೆ ಮಾಡಬೇಕು. ಯೋಜನೆಗಳನ್ನು ಬದಲಾವಣೆ ಮಾಡಬೇಕು. ಇದು ಒಂದೇ ಯೋಚನೆ ಇಟ್ಟುಕೊಂಡು ಯೋಚಿಸಿ. ಇದು ನಮ್ಮ ರಾಜ್ಯದಲ್ಲಿ ಬರೀ ಕನಸು ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ. ಡಿಮ್ಯಾಂಡ್ ನಂ. ೪೪ ರಲ್ಲಿ ಕೇಂದ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ವಿಷಯವಿದೆ. ಮಂಡ್ಯ ನ್ಯಾಶನಲ್ ಪೇಪರ ಮಿಲ್ಸ್ ಲಿಮಿಟೆಡ್‌ನಲ್ಲಿ ಸರ್ಕಾರದ ಹಣ ಏನು ಇದೆ. ಅದನ್ನು ಹಿಂದೂಸ್ಥಾನ್ ಪೇಪರ್ ಮಿಲ್ಸ್ ಕಾರ್ಖಾನೆಗೆ ವರ್ಗಾಯಿಸಲಾಗಿದೆ ಎಂದು ಹೇಳಿದ್ದಾರೆ. ಮಂಡ್ಯ ನ್ಯಾಶನಲ್ ಪೇಪರ್ ಮಿಲ್ಸ್, ಇದು ಒಂದು ಕರ್ಮಕಾಂಡ ಇದ್ದ ಹಾಗೆ. ಶರಾವತಿ ಕರ್ಮಕಾಂಡದ ತರಹ ಇದು ಒಂದು ಕರ್ಮಕಾಂಡ. ಮಂಡ್ಯ ನ್ಯಾಶನಲ್ ಪೇಪರ್ ಮಿಲ್ಸ್ ಮಾಲಿಕರು ಇವತ್ತಿನ ದಿವಸ ಅವರು ಮಾಡುತ್ತಾ ಇರತಕ್ಕಂಥ ಅನ್ಯಾಯಗಳು ಏನೆಂದರೆ. ಅವರು ಕಾರ್ಮಿಕರಿಗೆ ಅನ್ಯಾಯ ಮಾಡಿದ್ದು ಇದ್ದೇ ಇದೆ. ಅವರು ಸರ್ಕಾರಕ್ಕೆ ಕೊಡಬೇಕಾದ ಹಣ ಕೊಟ್ಟಿಲ್ಲ. ಪ್ರಾವಿಡೆಂಟ್ ಫಂಡ್ ಹಣ ಕೊಟ್ಟಿಲ್ಲ, ತೆರಿಗೆಗಳನ್ನು ಕೊಟ್ಟಿಲ್ಲ, ಯಾವುದನ್ನು ಕೊಡದೆ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದಾರೆ. ಅಂಥವರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ? ಸರ್ಕಾರದ ಹಣವನ್ನು ಹಿಂದೂಸ್ಥಾನ ಪೇಪರ್ ಕಾರ್ಪೋರೇಷನ್‌ಗೆ ಕೊಟ್ಟಿರುವುದು ಒಳ್ಳೆಯದು ಅಲ್ಲ. ಸರ್ಕಾರಿ ಸಂಸ್ಥೆಗಳಿಗೆ ಕೊಡಿರಿ, ಸರ್ಕಾರಿ ಸಂಸ್ಥೆಗಳನ್ನು ಚೆನ್ನಾಗಿ ನಡೆಸಿದರೆ ಬಹಳ ಸಂತೋಷ. ಯಾವ ಮಾಲೀಕರು ಒಂದು ಕಡೆ ಕಾರ್ಮಿಕರಿಗೆ ವಂಚನೆ ಇನ್ನೊಂದು ಕಡೆ ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾರೆ. ಅಂಥವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಹಣ ವಸೂಲಿ ಮಾಡಿದ್ದೀರಾ ? ಮುಖ್ಯವಾಗಿ ಅದರ ಮೇಲೆ

ಕಂಟ್ರೋಲ್ ಇದೆಯೋ ? ಇದ್ದರೆ ಸಂತೋಷ. ಇಲ್ಲದಿದ್ದರೆ ಕಂಪ್ಲೀಟ್ ಆಗಿ ಅಂತಹ ಇಂಡಸ್ಟ್ರೀ ಸರ್ಕಾರದ ಕಂಟ್ರೋಲ್‌ನಲ್ಲಿ ಇರುವಂತೆ ಏರ್ಪಾಡು ಮಾಡಬೇಕೆಂದು ಆಗ್ರಹ ಪಡಿಸಿ ಭಾಷಣ ಮುಗಿಸುತ್ತೇನೆ.

ಕೊನೆಯದಾಗಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ನೋಡಿದರೆ ಅನೇಕ ಕೇಸುಗಳನ್ನು ಎನ್. ಜಿ. ಗಳ ಮೇಲೆ ಹಾಕಿದ್ದೀರಿ. ಅದು ಸರ್ಕಾರಿ ನೌಕರರ ಮೇಲೆ ಹಾಕಿದ್ದೀರಿ. ೧೬೦. ೬೦೦. ೫೦೦ ರೂಪಾಯಿಗಳಿಗೆ ಸಪ್ಲಿಮೆಂಟರಿ ಡಿಮ್ಯಾಂಡ್ ಕೇಳಿದ್ದೀರಿ. ೬೦೦, ೫೦೦ ಕೊಡುವುದಕ್ಕೆ ಸರ್ಕಾರದವರು ಎಷ್ಟು ಖರ್ಚು ಮಾಡಿರಬಹುದೋ ? ಒಂದು ಉದಾಹರಣೆ ತಮಗೆ ಕೊಡುತ್ತೇನೆ. ಶಿವಮೊಗ್ಗದಲ್ಲಿರುವ ಶ್ರೀನಿವಾಸಾಚಾರ್ ರವರಿಗೆ ಯಾವುದೋ ಒಂದು ಬಾಬ್ತಿಗಾಗಿ ೬೦೦ ಕೊಡಬೇಕೆಂದು ಹೇಳಿದ್ದಾರೆ. ಇವಂತೂ ನನಗೆ ಅರ್ಥ ವಾಗುವುದಿಲ್ಲ. "State of Karnataka and others *Vs*. Srinivasachar, a warrant of attachment of movable property was issued by the Court of Munsiff, Shimoga in execution decree for payment of a decretal amount of Rs. 619.50 in the suit No. 648 of 1968, against the Superintendent, Govt. Dairy, Shimoga (Bhadravathi)." ಏನಾಯಿತು ಎಂದರೆ ಶ್ರೀನಿವಾಸಾಚಾರ್‌ರವರಿಗೆ ೬೧೯ ರೂಪಾಯಿ ೫೦ ಪೈಸೆ ಕೊಡಬೇಕೆಂದು ಕೋರ್ಟಿನಲ್ಲಿ ತೀರ್ಮಾನವಾಯಿತು. ಕೊಡದೇ ಇದ್ದುದಕ್ಕೆ ಮುನ್ಸೀಫ್ ಕೋರ್ಟಿನಲ್ಲಿ ಎಕ್ಸಿಕ್ಯೂಷನ್ ಡಿಕ್ರಿ ಪಡೆದು ಬಂದಿದ್ದಾರೆ. ಇದನ್ನು ನೋಡಿದರೆ ಸರ್ಕಾರ ಯಾವ ಅಧೋಗತಿಗೆ ಹೋಗಿದೆ ಎಂದು ಕೇಳುತ್ತೇನೆ. ಅವನ ಮೇಲೆ ಜಿದ್ದು ಇಟ್ಟುಕೊಂಡು ೬ ಸಾವಿರ ರೂಪಾಯಿ ಬೇಕಾದರೂ ಖರ್ಚು ಮಾಡುತ್ತೇವೆ ೬೦೦ ರೂಪಾಯಿ ಕೊಡುವುದಿಲ್ಲ ಎಂಬ ಮನೋಭಾವನೆಗೆ ಬಂದಿದೆ. ಸರ್ಕಾರದ ಹಣ ದುರುಪಯೋಗ ವಾಗುತ್ತಾ ಇದೆ, ಪೋಲು ಆಗುತ್ತಾ ಇದೆ. ಆದುದರಿಂದ ಇಂಥ ಮನೋಭಾವನೆ ಬಿಡಬೇಕು. ಇದೇ ರೀತಿ ೪-೫ ಕಡೆ ಡಿಮ್ಯಾಂಡ್ ಇಟ್ಟು ಇಷ್ಟು ಹಣ ಕೊಡಿ ಅಷ್ಟು ಹಣ ಕೊಡಿ ಎಂದು ಕೇಳಿದ್ದಾರೆ. ಇದು ನೋಡಿದರೆ ಸರ್ಕಾರದ ನೀತಿ ಸರಿಯಾದದ್ದು ಅಲ್ಲ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ)—ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕಂಥ ಈ ಬೇಡಿಕೆಯನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತೇನೆ. ಮೊದಲನೆಯದಾಗಿ ಹೇಳುವುದಾದರೆ ನಮ್ಮ ರಾಜ್ಯ ಸರ್ಕಾರದವರು ಮೈಸೂರ ಸ್ಟೇಟ್ ಅರೇಕಾ ನಟ್ ಮಾರ್ಕೆಟಿಂಗ್ ಆ್ಯಂಡ್ ಪ್ರೊಸೆಸಿಂಗ್ ಕೋ-ಆಪರೇಟಿವ್ ಫೆಡರೇಷನ್ ಎಂದು ಒಂದು ಹೊಸ ಸಂಸ್ಥೆ ಮಾಡಿ ಅದಕ್ಕೆ 37½ ಲಕ್ಷ ರೂಪಾಯಿ ಬಂಡ ವಾಳವನ್ನು ಕೊಟ್ಟಿದ್ದಾರೆ. ಇದರ ಉದ್ದೇಶ ಮಲೆನಾಡಿನಲ್ಲಿರತಕ್ಕಂಥ ಅಡಿಕೆ ಬೆಳೆಗಾರರಿಗೆ, ಇತ್ತೀಚೆಗೆ ಅಡಿಕೆ ಬೆಲೆ ಕುಸಿತ ಉಂಟಾದ್ದರಿಂದ ಅದರ ನಷ್ಟಕ್ಕೆ ಮತ್ತು ಅವರ ಆರ್ಥಿಕ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಬಗೆಹರಿಸಬೇಕು ಎಂದು. ಈ ರೀತಿಯಾಗಿ ಅಡಿಕೆ ಬೆಳೆಗಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕು ಎನ್ನುವ ದೃಷ್ಟಿ ಇದ್ದಿದ್ದರೆ ಅಂಥದೇ ಆದ ಒಂದು ಫೆಡರೇಷನ್ ಮೈಸೂರು ರಾಜ್ಯದಲ್ಲಿ ಹಿಂದೆ ಏನು ಇತ್ತೋ, ಅದಕ್ಕೇನೇ ಹಣ ಕೊಟ್ಟಿದ್ದರೆ ಈ ಅಡಿಕೆ ಬೆಳೆಗಾರರಿಗೆ ಅವರಿಗೆ ಬೇಕಾದ ಕೆಲಸ ಆಗುತ್ತಿರಲಿಲ್ಲವೇ. ಹಿಂದೆ ಇರುವ ಫೆಡರೇಷನ್ ಬಿಟ್ಟು ಮತ್ತೊಂದು ಫೆಡರೇಷನ್ ಮಾಡಿ ಅದಕ್ಕೆ 37½ ಲಕ್ಷ ರೂಪಾಯಿಯಷ್ಟು ಹಣವನ್ನು ಕೊಟ್ಟಿರುವ ಉದ್ದೇಶ ಏನು ? ಹಣಕಾಸಿನ ಕೊರತೆ ಇದ್ದ ಕಾಲದಲ್ಲಿ ಹೊಸ ಹೊಸ ಫೆಡರೇಷನ್ ಸ್ಥಾಪನೆ ಮಾಡುವುದರ ಉದ್ದೇಶ ಏನು ? ಇದರಲ್ಲಿ ರಾಜಕೀಯ ದಾಹ ಏನು ಇದೆ ಎನ್ನುವುದನ್ನು ತೋರಿಸಿ ಕೊಳ್ಳುವುದರ ಸಲುವಾಗಿ ಹೊಸ ಫೆಡರೇಷನ್ ಒಂದನ್ನು ಸ್ಥಾಪಿಸಿದ್ದೀರಿ. ಇದನ್ನು ನಿಜವಾಗಿಯೂ ಅಡಿಕೆ ಬೆಳೆಗಾರರ ಒಂದು ಹಿತದೃಷ್ಟಿಯಿಂದ ಸ್ಥಾಪನೆ ಮಾಡಿಲ್ಲ. ಹೊಸದಾಗಿ ಈ ಒಂದು ಫೆಡರೇಷನ್ ಸ್ಥಾಪನೆ ಮಾಡುವ ಕಾಲದಲ್ಲಿ ಇಂಥಾದ್ದೇ ಒಂದು ಫೆಡರೇಷನ್ ಮೈಸೂರು ರಾಜ್ಯದಲ್ಲಿ ಇದೆ ಎಂದು ತಾವು ತಿಳಿದುಕೊಂಡಿರಲಿಲ್ಲವೇ ಎಂದು ನಾನು ಕೇಳುತ್ತೇನೆ. ಮೈಸೂರು ಸ್ಟೇಟ್ ಅರೇಕಾ ನಟ್ ಮಾರ್ಕೆಟಿಂಗ್ ಕೋ ಆಪರೇಟಿವ್ ಫೆಡರೇಷನ್‌ಗೆ ಸಂಬಂಧಪಟ್ಟಂತೆ ಶಿವಮೊಗ್ಗಾದಲ್ಲೂ ಒಂದು ಅಡಿಕೆ ಫೆಡರೇಷನ್ ಇತ್ತು. ಅದಕ್ಕೆ ರಾಜ್ಯ ಸರ್ಕಾರ ಮತ್ತು ಕೋ ಆಪರೇಟಿವ್ ಸೊಸೈಟಿಗಳು ಹಣ ಹಾಕಿದ್ದಾರೆ. ಮತ್ತು ಆ ಫೆಡರೇಷನ್‌ನಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಗಳು ಅಸಿಸ್ಟೆಂಟ್ ರಿಜಿಸ್ಟ್ರಾರ್ ಕೆಲಸ ಮಾಡುತ್ತಿದ್ದಾರೆ. ಈಗ 37½ ಲಕ್ಷ ರೂಪಾಯಿಯನ್ನು, ಈ ಒಂದು ದೊಡ್ಡ ಪ್ರಮಾಣದ ಮೊತ್ತವನ್ನು ಈ ಒಂದು ಹೊಸ ಸಂಸ್ಥೆಗೆ ಏನು ಕೊಟ್ಟಿದ್ದೀರೋ, ಅದೇ ಹಣವನ್ನು ಹಿಂದೆ ಇದ್ದಂಥ ಫೆಡರೇಷನ್‌ಗೆ ಕೊಟ್ಟಿದ್ದರೆ ಎಷ್ಟೋ ಕೆಲಸವನ್ನು ಮಾಡಬಹುದಾಗಿತ್ತು. ಅದನ್ನು ಏತಕ್ಕೆ ಮಾಡಲಿಲ್ಲ ? ಈಗ ನೀವು 37½ ಲಕ್ಷ ರೂಪಾಯಿ ಏನು ಹಣ ಕೊಟ್ಟಿದ್ದೀರಿ. ಆ ಹಣ ಹೇಗೆ ಉಪಯೋಗವಾಗುತ್ತಾ ಇದೆ ಎನ್ನುವುದನ್ನು ತಿಳಿದುಕೊಂಡಿದ್ದೀರಾ? ಏತಕ್ಕೆಂದರೆ ಶಿವಮೊಗ್ಗಾ ಜಿಲ್ಲೆಯಲ್ಲಿರುವ ಮಲೆನಾಡಿನ ಅರೇಕಾ ಮಾರ್ಕೆಟಿಂಗ್ ಸೊಸೈಟಿ ಎನ್ನುವುದು ಒಂದು ಸಂಸ್ಥೆ ಇದೆ. ಅದು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಒಂದು ಸ್ಥಾಪನೆ ಮಾಡಿದ್ದು.

ಅದರಲ್ಲಿ ಹೇರಳವಾಗಿ ಬಂಡವಾಳ ಇದೆ, ಲಾಭ ಕೂಡ ಬರುತ್ತಾ ಇದೆ. ಅದಕ್ಕೆ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಅದಕ್ಕೆ ಪ್ರತಿಯೊಂದು ಕಡೆಯೂ ಶಾಖೆಗಳು ಇವೆ. ಈ ರೀತಿ ಮಲೆನಾಡಿನ ಅರೇಕಾ ಮಾರ್ಕೆಟಿಂಗ್ ಸೊಸೈಟಿ ಇದ್ದರೂ ಕೂಡ ಮಂಗಳೂರಿನಲ್ಲಿ ಈ ಒಂದು ಹೊಸ ಫೆಡರೇಷನ್ ಅನ್ನು ಸ್ಥಾಪನೆ ಮಾಡುವುದಕ್ಕೆ ಈ ಬಗ್ಗೆ ಒಂದು ವಾರದೊಳಗೆ ರಿಪೋರ್ಟ್ ಬೇಕು ಎಂದು ತರಿಸಿಕೊಂಡಿದ್ದೀರಾ. ಇದನ್ನು ಜಾಯಿಂಟ್ ರಿಜಿಸ್ಟ್ರಾರ್ ಮಾಡುವುದಕ್ಕಾಗುವುದಿಲ್ಲ ಎಂದು ತಕರಾರು ಆಗಿದ್ದರೂ ಕೂಡ ಶ್ರೀಮಾನ ಕೆ. ಎಚ್. ಪಾಟೀಲರ ಪ್ರಭಾವದಿಂದ ಜಾಯಿಂಟ್ ಸೆಕ್ರೆಟರಿಯನ್ನು ಹಿಡಿದು, ರಿಪೋರ್ಟ್ ತರಿಸಿಕೊಂಡು ಈ ಒಂದು ಹೊಸ ಸಂಸ್ಥೆಯನ್ನು ಮಂಗಳೂರಿನಲ್ಲಿ ಸ್ಥಾಪಿಸಿದ್ದೀರಿ. ಮೊದಲು ಇದನ್ನು ಗುಟ್ಟಾಗಿ ಮಾಡಿಕೊಂಡು ಈಗ ಅದರಲ್ಲಿ ಏನು ನಡೆಯುತ್ತಾ ಇದೆ ಎನ್ನುವುದನ್ನು ಬಹಿರಂಗ ಪಡಿಸಿದ್ದಾರೆ. ಇದರಲ್ಲಿ ಒಬ್ಬೊಬ್ಬ ಬೆಳೆಗಾರನಿಗೆ ಒಂದೊಂದು ತರಹ ದರ ಕೊಡುತ್ತಾರೆ. ಒಬ್ಬ ಚೆನ್ನಾಗಿರುವ ವ್ಯಕ್ತಿ ಹೋದರೆ ಅವನಿಗೆ ಒಂದು ತರಹ ದರ, ಶ್ರೀಮಾನ ಹೆಚ್. ಸಿದ್ದವೀರಪ್ಪನವರಂತಹವರು ಹೋದರೆ ಅವರಿಗೆ ಒಂದು ತರಹ ದರ, ನಾನು ಹೋದರೆ ನನಗೆ ಒಂದು ತರಹ ದರ ಕೊಡುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ನನಗೆ ಅಡಿಕೆಯೂ ಇಲ್ಲ, ನಾನು ಹೋಗೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅಲ್ಲಿ ಯಾವ ರೀತಿ ನಡೆಯುತ್ತಾ ಇದೆ ಎನ್ನುವುದಕ್ಕೆ ಉದಾಹರಣೆ ಕೊಟ್ಟೆ. ಅಡಿಕೆ ಬೆಳೆಗಾರರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಆ ಸೊಸೈಟಿಯವರು ಅಡಿಕೆಯನ್ನು ಕೊಂಡುಕೊಳ್ಳಲಿಕ್ಕೆ ದುಡ್ಡು ಕೊಟ್ಟಿದ್ದಾರೆ. ಆದರೆ ಅವರು ಏನು ಮಾಡುತ್ತಿದ್ದಾರೆ ಎಂದರೆ ಮುಖ ನೋಡಿ ಮಣೆ ಹಾಕುತ್ತಿದ್ದಾರೆ. ತಮಗೆ ಬೇಕಾದವರಿಗೆ ೨೫ ರೂಪಾಯಿ ಜಾಸ್ತಿ ಕೊಟ್ಟು ಖರೀದಿ ಮಾಡುತ್ತಾರೆ. ಇನ್ನೂ ಬೇಕಾದವರಿಗೆ ೧೦೦ ರೂಪಾಯಿ ಜಾಸ್ತಿ ಕೊಟ್ಟು ಖರೀದಿ ಮಾಡುತ್ತಾರೆ. ಹರಾಜಿನಲ್ಲಿ ಹೋಗಿ ಕೇಳುವುದಕ್ಕೆ ಯಾರೂ ತಯಾರಿಲ್ಲ. ಅವರು ಮಾರ್ಕೆಟ್‌ನಲ್ಲಿ ನಾನಾ ರೀತಿಯಲ್ಲಿ ತೆಗೆದುಕೊಳ್ಳುತ್ತಾರೆ. ಆದುದರಿಂದ ನೀವು ಕೊಟ್ಟಿರುವ $37\frac{1}{2}$ ಲಕ್ಷ ರೂಪಾಯಿ ಏನು ಇದೆ. ಅದು ದುರುಪಯೋಗವಾಗುತ್ತದೆ ಎಂದು ಹೇಳುತ್ತೇನೆ. ಈ ಸಂಸ್ಥೆ ಹುಟ್ಟಿದಾಗಲೇ ವಿಷಗರ್ಭದಲ್ಲಿ ಹುಟ್ಟಿದೆ, ಆದುದರಿಂದ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಪ್ರಾರಂಭದಲ್ಲೇ ಇದನ್ನು ತಡೆಗಟ್ಟುವಂತೆ ಮಾಡಿರಿ. ಸಾಗರದಲ್ಲೂ ಕೂಡ ಒಂದು ಅರೇಕಾ ಕೋ-ಆಪರೇಟಿವ್ ಸೊಸೈಟಿ ಇದೆ. ಅದು ಬಹಳ ಚನ್ನಾಗಿ ನಡೆಯುತ್ತಾ ಇದೆ. ಹೊಸದಾಗಿ ಸ್ಥಾಪನೆ ಆಗಿರುವ ಫೆಡರೇಷನ್‌ಗೆ ಒಂದು ಏಜಂಟಗಿರಿ ಕೊಟ್ಟಿದ್ದಾರೆ. ಅವರು ಲಕ್ಷಾಂತರ ರೂಪಾಯಿ ಅಡಿಕೆಯನ್ನು ಈಗಾಗಲೇ ಕೊಂಡುಕೊಂಡು ಇಟ್ಟು ಬಿಟ್ಟಿದ್ದಾರೆ. ಅವರು ೨೦೦-೨೫೦-೩೦೦ ರೂಪಾಯಿ ದರದಲ್ಲಿ ೧೦-೨೦ ಲಕ್ಷ ರೂಪಾಯಿ ಅಡಿಕೆ ಕೊಂಡುಕೊಂಡರು. ಅವರಿಗೆ ಯಾವಾಗ ಈ ಒಂದು ಹೊಸ ಫೆಡರೇಷನ್ ಗಿರಿ ಸಿಕ್ಕಿತೋ ಆ ದಾಸ್ತಾನು ಮಾಡಿಕೊಂಡಿದ್ದ ಅಡಿಕೆಯನ್ನು ಹೊಸದಾಗಿ ಕೊಂಡುಕೊಂಡಿದ್ದೇವೆ ಎಂದು ೩೦೦-೩೫೦-೪೦೦ ರೂಪಾಯಿ ದರದಲ್ಲಿ ತೋರಿಸಿ ಬುಕ್ ಅಡ್ಜಸ್ಟಮೆಂಟ್ ಮಾಡಿಕೊಂಡಿದ್ದಾರೆ. ಇದರ ಹರಿಕಥೆ ಹೇಳಿದರೆ ಬಹಳ ದೊಡ್ಡದಾಗುತ್ತದೆ. ಈಗ ಹೊಸದಾಗಿ ಸ್ಥಾಪನೆ ಆಗಿರತಕ್ಕಂಥ ಸಂಸ್ಥೆಗೆ ಮರಿ ಏಜೆಂಟರಂತಹ ಒಂದು ದೊಡ್ಡ ವ್ಯೂಹವನ್ನು ರಚನೆ ಮಾಡಿಕೊಂಡಿರುವುದರಿಂದ ಈ ಫೆಡರೇಷನ್‌ಗೆ ಕೊಟ್ಟ ಹಣ ಲಾಭವಾಗದೇ ಇರುವ ರೀತಿಯಲ್ಲಿ ಈ ಹಣವನ್ನು ಕಬಳಿಸುವುದಕ್ಕೆ ಪ್ರಯತ್ನ ನಡೆಯುತ್ತಾ ಇದೆ. ಈ ರೀತಿಯಾಗಿ ಒಂದು ಹೊಸ ಸಂಸ್ಥೆ ಸ್ಥಾಪನೆಮಾಡಿ ಅದರಿಂದ ಒಂದು ಹೊಸ ವರ್ಗ ಸೃಷ್ಟಿ ಮಾಡಿದರೆ ಸರ್ಕಾರದ ಹಣಕ್ಕೆ ಲಾಭವಾಗುವುದಿಲ್ಲ. ಆದುದರಿಂದ ನಾನು ಹಣಕಾಸಿನ ಸಚಿವರನ್ನು ಪ್ರಶ್ನೆ ಮಾಡುತ್ತೇನೆ. ಹಿಂದೆ ಒಂದು ಫೆಡರೇಷನ್ ನಮ್ಮ ಮೈಸೂರು ರಾಜ್ಯದಲ್ಲಿ ಇದ್ದರೂ ಕೂಡ ಈ ಒಂದು ಹೊಸ ಫೆಡರೇಷನ್ ಸ್ಥಾಪನೆ ಮಾಡುವುದಕ್ಕೆ ಕಾರಣ ಏನು ಎಂದು ತಾವು ಹೇಳಬಹುದಾಗಿತ್ತು. ಮತ್ತೊಂದನ್ನು ಜೀವಂತವಾಗಿ ಇರಿಸಿಕೊಂಡು ಅದಕ್ಕೆ ಪ್ಯಾರಲೆಲ್ ಆಗಿ ಈ ಒಂದು ಫೆಡರೇಷನ್ ಮಾಡಿದ್ದಕ್ಕೆ ತಾವು ಸಮಜಾಯಿಸಿ ಹೇಳಬೇಕು ಎಂದು ನಾನು ಕೇಳುತ್ತೇನೆ.

ಹಿಂದೆ ಇದ್ದ ಅರೇಕಾ ಫೆಡರೇಷನ್ ಏನಿತ್ತು. ಅದು ನಮ್ಮ ಮೈಸೂರು ಸೀಮೆಗೆ ಮಾತ್ರವೇ ಸೀಮಿತವಾಗಿತ್ತು. ಆದರೆ ಇದರ ವ್ಯಾಪ್ತಿಯನ್ನು ಕೇರಳ ರಾಜ್ಯಕ್ಕೂ ವಿಸ್ತರಿಸಬೇಕೆಂದು ಸರ್ಕಾರದವರು ಪರಿಶೀಲನೆ ನಡೆಸುತ್ತಿದ್ದಾಗ ಇಲ್ಲಿ ಏಕಾಏಕಿ ಇನ್ನೊಂದು ಫೆಡರೇಷನ್ನನ್ನು ಸ್ಥಾಪನೆ ಮಾಡಿದ್ದಾರೆ. ಈ ಎರಡು ರಾಜ್ಯಗಳಿಗೂ ಒಂದು ಫೆಡರೇಷನ್ ಇರಬೇಕೆಂಬುದು ಒಂದು ಅಭಿಪ್ರಾಯ ಇದ್ದಾಗ ಇದರಲ್ಲಿ ನಮ್ಮ ರಾಜ್ಯ ಸರ್ಕಾರದವರು ಎಷ್ಟು ಹಣವನ್ನು ತೊಡಗಿಸುತ್ತಾರೆಯೋ ಅಷ್ಟೇ ಹಣವನ್ನು ಕೇರಳ ರಾಜ್ಯ ಸರ್ಕಾರದವರೂ ತೊಡಗಿಸಬೇಕೆಂದಿತ್ತು.

ಶ್ರೀ ಬಿ. ವಿ. ಕಕ್ಕಿಲಾಯ :—ಕೇರಳ ರಾಜ್ಯದವರು ತಮ್ಮ ಭಾಗದ ಮುವತ್ತೇಳುವರೆ ಲಕ್ಷ ರೂಪಾಯಿಗಳನ್ನು ಈ ಮೈಸೂರು ಸರ್ಕಾರದವರು ಕೊಟ್ಟ ಸಮಯದಲ್ಲೇ ಅವರು ಕೊಟ್ಟರು.

ಶ್ರೀ ಕಾಗೋಡು ತಿಮ್ಮಪ್ಪ :—ಮುಖ್ಯವಾಗಿ ಈ ಫೆಡರೇಷನ್ನನ್ನು ಸ್ಥಾಪಿಸಿದ್ದರ ಉದ್ದೇಶ ಅಡಕೆ ಬೆಳೆಗಾರರ ಹಿತದೃಷ್ಟಿಯನ್ನು ಸಾಧಿಸಬೇಕೆಂಬುದೇ ಆಗಿದೆ. ಅವರ ಮಾಲಿಗೆ ಒಳ್ಳೆ ಧಾರಣೆ ಮಾರು ಕಟ್ಟೆಯಲ್ಲಿ ಸಿಗುವಂತೆ ಮಾಡಬೇಕಾದುದು ಇದರ ಮುಖ್ಯ ಕರ್ತವ್ಯಗಳಲ್ಲಿ ಒಂದು. ಆದರೆ ಒಂದೇ ವ್ಯವಹಾರದಲ್ಲಿ ಎರಡು ಸಂಸ್ಥೆಗಳು ಕೆಲಸಮಾಡುವುದೆಂದರೆ ಅದು ಸಾಧ್ಯವಿಲ್ಲ. ಇದರಿಂದ ಅವರಿಗೆ ಆಗ ತಕ್ಕ ಉಪಕಾರಕ್ಕಿಂತ ಅಪಕಾರವೇ ಹೆಚ್ಚಾಗುತ್ತದೆ. ಈ ಫೆಡರೇಷನ್ನಿನವರು ಮುಖ್ಯವಾಗಿ ಅಡಕೆ ಮತ್ತು ಮೆಣಸು ಇತ್ಯಾದಿಗಳನ್ನು ಕೂಡ ಮಾರಾಟ ಮಾಡತಕ್ಕ ಏಜನ್ಸಿಗಳನ್ನು ಅಂದರೆ ಸಹಕಾರ ಸಂಘಗಳನ್ನು ಮಾಡದೆ ಬೇರೆ ಮಾರ್ಗ ಹಿಡಿದದ್ದು ಸರಿಯಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಈ ವ್ಯವಹಾರವನ್ನು ವಹಿಸಿಕೊಳ್ಳಬೇಕೆಂದು ಮುಂದೆ ಬಂದಾಗ ಫೆಡರೇಷನ್ನಿನವರು ಅವರಿಗೆ ಅಲ್ಲಸಲ್ಲದ ತಕ್ರಾರುಗಳನ್ನು ಒಡ್ಡಿದರು. ಒಂದೇ ಕಡೆಯಲ್ಲಿ ಎರಡು ಫೆಡರೇಷನ್ನುಗಳು ಕೆಲಸ ಮಾಡುವುದಕ್ಕೆ ಹೊರಟರೆ ಅಲ್ಲಿ ವ್ಯಾಪಾರದಲ್ಲಿ ಪೈಪೋಟಿ ಹುಟ್ಟಿ ಈ ಸಂಸ್ಥೆಗಳಿಗೆ ಸರ್ಕಾರ ಕೊಡತಕ್ಕ ಹಣ ದುರ್ವಿನಿಯೋಗ ವಾಗುತ್ತದೆ. ಮೊದಲು ಇದನ್ನು ತಡೆಹಿಡಿಯಲು ಸರ್ಕಾರದವರು ನಿರ್ದೇಶನ ಕೊಡಬೇಕು. ಇನ್ನು ಈ ಸಂಸ್ಥೆಗೆ ಡೈರೆಕ್ಟರುಗಳನ್ನು ನಾಮಕರಣ ಮಾಡತಕ್ಕ ವಿಚಾರದಲ್ಲಿ ಅಡಿಕೆ ಬೆಳೆಗಾರರಿಗೆ ಮತ್ತು ಅಡಕೆ ಬೆಳೆಯುತಕ್ಕ ಪ್ರದೇಶಗಳಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಬೇಕು. ಬಹಳ ರಾಜಕೀಯವನ್ನು ಬಳಸಿ ಶಿವಮೊಗ್ಗ ಜಿಲ್ಲೆಗೆ ಎರಡು ಸ್ಥಾನಗಳನ್ನು ಮಾತ್ರ ಕೊಟ್ಟಿದ್ದಾರೆ. ಆದರೆ ಈ ಫೆಡರೇಷನ್ ಸ್ಥಾಪನೆಗಾಗಿ ಸತತವಾಗಿ ಹೋರಾಟ ನಡೆಸಿದ ಚಿಕ್ಕಮಗಳೂರು ಜಿಲ್ಲೆಗೆ ಯಾವ ಪ್ರಾತಿನಿಧ್ಯವನ್ನೂ ಕೊಟ್ಟಿಲ್ಲ. ಅಲ್ಲಿಯೂ ಅಡಕೆ ಮೆಣಸಿನ ಬೆಳೆಗಾರರಿದ್ದಾರೆ. ಆದರೆ ಅವರೇನು ಪಾಪಮಾಡಿದ್ದರೋ ಅವರನ್ನು ಕೈಬಿಟ್ಟಿದ್ದಾರೆ. ಇದರಲ್ಲಿ ಎಲ್ಲ ವರ್ಗದ ಜನರಿಗೂ ಪ್ರಾತಿನಿಧ್ಯ ದೊರೆಯುವುದಕ್ಕೆ ಅವಕಾಶವಿರಬೇಕು. ಇದನ್ನೆಲ್ಲ ಮಾನ್ಯ ಅರ್ಥಸಚಿವರು ವಿಚಾರ ಮಾಡಿ ಅಡಕೆ ಬೆಳೆಗಾರರಿಗೆ ರಕ್ಷಣೆ ದೊರೆಯುತಕ್ಕ ರೀತಿಯಲ್ಲಿ ಅವಕಾಶ ಮಾಡಬೇಕು. ಇನ್ನು ಈ ಎರಡು ಫೆಡರೇಷನ್ನುಗಳನ್ನು ಒಂದುಗೂಡಿಸುವುದಕ್ಕೆ ಸಾಧ್ಯವಾಗದಿದ್ದರೆ ಒಂದಕ್ಕೆ ಎಷ್ಟು ಧನ ಸಹಾಯ ವನ್ನು ನೀಡುತ್ತಾರೋ ಅಷ್ಟೇ ಧನ ಸಹಾಯವನ್ನು ಇನ್ನೊಂದಕ್ಕೂ ನೀಡಬೇಕು. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಆ ಇನ್ನೊಂದು ಫೆಡರೇಷನ್ನಿನಲ್ಲಿ ವೀರಭದ್ರಪ್ಪ ಗೌಡರು ಎಂಬತಕ್ಕವರನ್ನು ನಾಮಕರಣ ಮಾಡಿದ್ದಾರೆ. ಅವರು ಈ ದಿವಸ 'ಓ' ಕಾಂಗ್ರೆಸ್ಸಿನಲ್ಲಿದ್ದಾರೆ. ಅದಕ್ಕಾಗಿ ಅದಕ್ಕೆ ಹೆಚ್ಚಿನ ಸಹಾಯ ಸಿಕ್ಕುತ್ತಿಲ್ಲ ಎಂಬ ಒಂದು ಸಂಶಯ ಉಂಟಾಗಿದೆ. ಅವರು ಹಳೇ ಕಾಂಗ್ರೆಸ್ಸಿಗರು. ಹಿಂದೆ ಅವರನ್ನು ಮೆರೆಸಿದವರು ಇವರೇ. ಅಂತೂ ಒಟ್ಟಿನಲ್ಲಿ ನಾನು ಈ ಎಲ್ಲ ಬೇಡಿಕೆಗಳನ್ನು ವಿರೋಧಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್ಲು) :—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ೧೯೭೩–೭೪ ನೇ ಸಾಲಿನ ಸಪ್ಲಿಮೆಂಟರಿ ಗ್ರ್ಯಾಂಟ್ಸ್‌ಗಳನ್ನು ಸಭೆಯ ಮುಂದಿಟ್ಟು ಇದಕ್ಕೆ ನಮ್ಮ ಅನುಮತಿ ಯನ್ನು ಕೇಳಿದ್ದಾರೆ. ನಾನು ಇದರಲ್ಲಿ ಮುಖ್ಯವಾಗಿ ಎರಡು ಮೂರು ಡಿಮ್ಯಾಂಡಗಳ ಮೇಲೆ ಮಾತ್ರ ಮಾತನಾಡುವವನಿದ್ದೇನೆ.

ಡಿಮ್ಯಾಂಡ್ ನಂಬರ್ (೧೬) ರಲ್ಲಿ ಮಾನ್ಯ ಅರ್ಥ ಸಚಿವರು ೧೨ ಲಕ್ಷದ ೫೦ ಸಾವಿರ ರೂಪಾಯಿ ಗಳನ್ನು ಕೇಳಿದ್ದಾರೆ. ಅವರು ಅದೇ ಡಿಮ್ಯಾಂಡಿನ ಎಕ್ಸ್‌ಪ್ಲೆನೇಷನ್ನಿನಲ್ಲಿ ವಿವರಗಳನ್ನು ತಿಳಿಸುತ್ತ—ಇದೊಂದು ಕೇಂದ್ರ ಸರ್ಕಾರದ ಸ್ಕೀಂ, ಇದಕ್ಕೆ ಸಿಬ್ಬಂದಿ ಬೇಕು, ಯಂತ್ರಸಾಮಗ್ರಿಗಳು ಬೇಕು ಎಂದು ಹೇಳಿದ್ದಾರೆ. ಈ ಇಲಾಖೆಯು ಮೈನ್ಸ್ ಮತ್ತು ಜಿಯ್ಯಾಲಾಜಿಕಲ್‌ಗೆ ಸಂಬಂಧಿಸಿದ್ದೆಂದು ತಿಳಿದುಕೊಂಡಿದ್ದೇನೆ. ಭೂ ಗರ್ಭದಲ್ಲಿ ಅಡಗಿರತಕ್ಕ ನೀರನ್ನು ಪತ್ತೆ ಹಚ್ಚಲು ಪ್ರತಿಯೊಂದು ತಾಲ್ಲೂಕಿನಲ್ಲೂ ಸರ್ವೆಕ್ರಮ ಕೈ ಗೊಳ್ಳಬೇಕೆಂಬುದು ಇದರ ಮುಖ್ಯ ಉದ್ದೇಶ. ಆದರೆ ಕೆಲವು ತಾಲ್ಲೂಕಗಳಲ್ಲಿ ಇದರ ಬಗ್ಗೆ ಸರ್ವೆ ಕಾರ್ಯ ನಡೆದಿದೆ. ಆದರೆ ಈಗ ಎಲ್ಲಿ ಸರ್ವೆ ಕಾರ್ಯ ನಡೆದಿದೆ, ಅದಕ್ಕೆ ಕೇವಲ ಒಂದು ಒಂದೂವರೆ ಫರಲಾಂಗ್ ದೂರದಲ್ಲಿರತಕ್ಕ ಅನೇಕ ಹಳ್ಳಿಗಳಲ್ಲಿ ಈ ಸರ್ವೆ ಕಾರ್ಯ ನಡೆದಿಲ್ಲ. ಅಲ್ಲಿ ರೈತರು ಸಾಲ ಪಡೆಯಬೇಕಾಗಿದ್ದರೆ ಭೂಅಭಿವೃದ್ಧಿ ಬ್ಯಾಂಕಿನವರು ಇವರಿಂದ ಒಂದು ಸರ್ಟಿಫಿಕೇಟನ್ನು ಕೇಳುತ್ತಾರೆ. ಈ ಕೆಲಸಗಳನ್ನು ಅವೈಜ್ಞಾನಿಕ ರೀತಿಯಲ್ಲಿ ಮಾಡದೆ ವೈಜ್ಞಾನಿಕ ರೀತಿಯಲ್ಲೇ ಮಾಡಬೇಕೆಂದು ಹೇಳ ತಕ್ಕವರಲ್ಲಿ ನಾನೂ ಒಬ್ಬ. ರಾಜ್ಯದಲ್ಲಿ ಎಲ್ಲ ತಾಲ್ಲೂಕುಗಳಲ್ಲೂ ಇದರ ಸರ್ವೆ ಇನ್ನು ಆಗಿಲ್ಲ. ನಮ್ಮ ಕಣ್ಣು ಎದುರಿಗೆ ನೀರು ಇರತಕ್ಕ ದೃಶ್ಯಗಳನ್ನು ಕಂಡರೂ ಈ ಸರ್ವೆ ಆಗದಿದ್ದರೆ ಅದಕ್ಕೆ ಪುರಸ್ಕಾರ ಸಿಕ್ಕುವಂತಿಲ್ಲ. ಸಾಲ ಸಿಕ್ಕುವುದೂ ಇಲ್ಲ. ನಮ್ಮ ರಾಜ್ಯದಲ್ಲಿ ಬೈಲು ಸೀಮೆ ಎಂದರೆ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಇಂಥ ಜಿಲ್ಲೆಗಳಲ್ಲಿ ದೊಡ್ಡ ನದಿಗಳೂ ಇಲ್ಲ, ದೊಡ್ಡ ಪ್ರಮಾಣದ ಜಲಾಶಯಗಳೂ ಇಲ್ಲ. ನಮ್ಮಲ್ಲಿ ಆಕಾಶದಿಂದ ಮಳೆ ಬಂದರೆ ನೀರು ದೊರೆಯಬೇಕು. ಅದನ್ನು ಬಿಟ್ಟರೆ ಭೂಮಿ ಯಲ್ಲಿರುವುದನ್ನು ಉಪಯೋಗಿಸಿಕೊಳ್ಳಬೇಕು.' ಅದನ್ನು ಬಿಟ್ಟರೆ ಕುಡಿಯುವುದಕ್ಕೆ ಕೂಡ ನೀರಿಲ್ಲ. ಮಳೆ ನಾಡಿನಲ್ಲಿ ಹೆಚ್ಚು ನೀರು ದೊರೆಯಬಹುದು, ಬೈಲು ಪ್ರಾಂತ್ಯದಲ್ಲಿ ಆ ರೀತಿ ಇಲ್ಲ. ಕುಡಿಯುವುದಕ್ಕೆ

ಕೂಡ ನೀರು ಸಿಗದೆ ತೊಂದರೆಯಾಗಿದೆ. ಆದರೆ ಸರಕಾರ ಇಲ್ಲಿಯವರೆಗೆ ನಿಖರವಾಗಿ ಎಲ್ಲಿ ನೀರು ದೊರೆಯುವುದು, ಎಲ್ಲಿ ಬಾವಿ ತೆಗೆಯಬಹುದು ಎಂದು ಹೇಳುವ ಪರಿಸ್ಥಿತಿಯಲ್ಲಿಲ್ಲ. ಇಲ್ಲಿಯ ವರೆಗೆ ಹಾಗೆ ತಿಳಿಸಿಲ್ಲ. ದೇಶಾಭಿವೃದ್ಧಿ ಮತ್ತು ವ್ಯವಸಾಯಾಭಿವೃದ್ಧಿ ಬಗ್ಗೆ ಸರಕಾರ ಪ್ರಚಾರ ಮಾಡುವುದರಲ್ಲಿ ಅರ್ಥವಿಲ್ಲ.

ಡಿಮ್ಯಾಂಡ್ ನಂ. ೨೪–A ನಲ್ಲಿ ಇಂದು ೭೯ ಲಕ್ಷ ೫೬ ಸಾವಿರ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅದರಿಂದ ಉಪಯೋಗವಾಗುವಂತಿದ್ದರೆ ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದೆ. ಹಿಂದೆ ಮೈಸೂರು ಸಿಲ್ಕ್ ಎಂದರೆ ಪ್ರಪಂಚದಲ್ಲೇ ಹೆಸರುವಾಸಿಯಾಗಿತ್ತು. ಇಂದು ಬೆಳೆಯುವ ದೇಶಿಯ ತಳಿ ಚೆನ್ನಾಗಿಲ್ಲ. ಜಪಾನ್, ಚೈನಾ ದೇಶಗಳಲ್ಲಿ ಒಳ್ಳೆಯ ತಳಿಯಿದೆ. ಉತ್ತಮವಾದ ಹುಳು ಸಾಕಿ ಒಳ್ಳೆಯ ರೀತಿನೀತಿಯನ್ನು ಅನುಸರಿಸುತ್ತಿದ್ದಾರೆ. ಇಂದು ನಮ್ಮ ಜಿಲ್ಲೆಯಲ್ಲಿ ತಳಿಗೆ ಸಂಪೂರ್ಣ ರೋಗವುಂಟಾಗಿದೆ. ಹೊಸ ಮತ್ತು ಹಳೆಯ ತಳಿಗಳೆರಡಕ್ಕೂ ರೋಗ ತಗಲಿದೆ. ಮಾಗಡಿ, ಚನ್ನಪಟ್ಟಣ, ಚಾಮರಾಜನಗರ ಮುಂತಾದ ಕಡೆ ಸೀಡ್ ಉತ್ಪತ್ತಿ ಮಾಡುವರು. ಇದು ಬಹಳ ಸೂಕ್ಷ್ಮ ಪ್ರಾಣಿ. ನಮ್ಮ ಕಡೆ ಸುಣ್ಣದ ರೋಗ ತಗಲುವುದು, ಇದರಿಂದ ಗೂಡು ಕಟ್ಟುವುದಿಲ್ಲ. ಕೊನೆಯವೇಳೆಗೆ ಈ ರೋಗ ಬರುವುದು. ಇದರಿಂದ ರೈತರಿಗೆ ತೊಂದರೆಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಈ ರೋಗ ಬಂದು ರೈತರು ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ಇಲಾಖೆಯಲ್ಲಿರುವ ಸೀಡ್ ಏರಿಯಾಕ್ಕೆ ಸಂಬಂಧಪಟ್ಟ ಅಧಿಕಾರಿ ಸರಕಾರದ ಗಮನಕ್ಕೆ ಇದನ್ನು ತರಬೇಕಾಗಿದೆ. ಇಷ್ಟು ಜನ ರೈತರಿಗೆ ಇಷ್ಟು ಅಧಿಕಾರಿಗಳು ಎಂದು ಗೊತ್ತುಮಾಡಿದ್ದಾರೆ, ಫೀಲ್ಡ್ ಆಫೀಸರ್ಸ್, ಡೆಮಾನ್‌ಸ್ಟ್ರೇಟರ್ಸ್ ಮುಂತಾದವರಿದ್ದಾರೆ. ಅವರಿಗೆ ಸಂಬಳ ಸಿಕ್ಕುವುದು, ಗಿಂಬಳ ಕೂಡ ಸಿಕ್ಕುವುದು, ಅವರು ಪ್ರತಿನಿತ್ಯ ಯಾವ ಮೊಟ್ಟೆ ತಂದರು ಮುಂತಾದುವುಗಳ ಬಗ್ಗೆ ನಿಖರವಾದ ಲೆಕ್ಕವನ್ನಿಡಬೇಕು. ಆದರೆ ಅಧಿಕಾರಿಗಳು ತಮ್ಮ ಕರ್ತವ್ಯ ಲೋಪಮಾಡುವರು. ಇದರಿಂದ ಹುಳು ಸಾಕುವವರಿಗೆ ಕೋಟಿಗಟ್ಟಲೆ ನಷ್ಟವಾಗುವುದು. ಇದನ್ನು ಹಿಂದಿನಿಂದ ಎಷ್ಟೋ ಸಲ ಗಮನಕ್ಕೆ ತಂದರು ಸೂಕ್ತ ಕ್ರಮ ಕೈಕೊಂಡಿಲ್ಲ. ಈ ಇಲಾಖೆ ಮುಖ್ಯಮಂತ್ರಿಗಳ ಕೈಲಿದೆ. ಆದರೂ ಕೂಡ ಅಪಚಾರವಾಗಿ ಲಕ್ಷಾಂತರ ರೈತರಿಗೆ ತೊಂದರೆಯಾಗುತ್ತಿದೆ. ಹಾಗಿರುವಾಗ ಯಾವರೀತಿ ಒಪ್ಪಿಕೊಳ್ಳಲು ಸಾಧ್ಯ ? ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಹಾಯವಾಗುವುದಾದರೆ ಒಪ್ಪಿಗೆ ಕೊಡಬಹುದು. ಸರಕಾರ ನಾವು ಕಷ್ಟಗಳನ್ನು ಹೇಳುತ್ತಿದ್ದಾಗ್ಯೂ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಖಾಸಗಿಯವರು ಸರಿಯಾಗಿ ಗೂಡುಗಳನ್ನು ಸರಬರಾಜು ಮಾಡುತ್ತಿಲ್ಲ. ಸುಮಾರು ಒಂದೆರಡು ವರ್ಷದ ಹಿಂದೆ ನೂರು ಮೊಟ್ಟೆಗೆ ೧೦–೧೨ ರೂಪಾಯಿ ಇತ್ತು. ಈಗ ೩೦–೪೦ ರೂಪಾಯಿಯಾಗಿದೆ, ಕೆಲವು ಸಂದರ್ಭಗಳಲ್ಲಿ ಹೆಚ್ಚು ಡಿಮ್ಯಾಂಡ್ ಇರುವಾಗ ೬೦ ರೂಪಾಯಿಗಳವರೆಗೂ ಬೆಲೆ ಏರುವುದು. ಇಂಥ ಪರಿಸ್ಥಿತಿ ಇದೆ. ಸೀಡ್ಸ್ ಒದಗಿಸುವವರು ಲೈಸೆನ್ಸ್ ಪಡೆಯಬೇಕೆಂದಿದೆ. ಸರಕಾರದವರು ಸೀಡ್ ಫಾರಂ ಮಾಡಿದ್ದಾರೆ. ೩–೪ ತಿಂಗಳಿಂದ ಮೊಟ್ಟೆ ತಯ್ಯಾರು ಮಾಡಿಲ್ಲ. ಆದರೆ ಇನ್‌ಸ್ಪೆಕ್ಟರು, ಡೆಮಾನ್‌ಸ್ಟ್ರೇಟರು ಮುಂತಾದ ಅಧಿಕಾರಿಗಳಿಗೆ ಸಂಬಳ ಕೊಡುತ್ತಿದ್ದಾರೆ. ರೈತರಿಗೆ ಮಾತ್ರ ಇದರಿಂದ ಸಹಾಯವಾಗಿಲ್ಲ. ಒಂದು ಕಡೆ ರೋಗ, ಇನ್ನೊಂದು ಕಡೆ ದುಬಾರಿ ಬೆಲೆ. ಈ ರೀತಿ ರೈತರು ತೊಂದರೆಗೆ ಈಡಾಗಿದ್ದಾರೆ. ಇಂದು ಕರ್ನಾಟಕದಲ್ಲಿ ಭಾರತದೇಶದಲ್ಲಿ ಉತ್ಪತ್ತಿಯಾಗುವ ರೇಷ್ಮೆಯಲ್ಲಿ ಶೇಕಡ ೮೦ ರಷ್ಟು ಉತ್ಪತ್ತಿಯಾಗುತ್ತಿದೆ. ಇದರಿಂದ ಕೋಟ್ಯಾಂತರ ರೂಪಾಯಿ ವಿದೇಶಿವಿನಿಮಯ ದೊರೆಯುತ್ತಿದೆ. ಇದರಿಂದ ಲಾಭವಾಗಿದೆ.

ರೇಷ್ಮೆ ಇಲಾಖೆಯನ್ನು ಮತ್ತು ರೇಷ್ಮೆಯನ್ನು ಅಭಿವೃದ್ಧಿ ಪಡಿಸುವುದು ಆದ್ಯಕರ್ತವ್ಯ ಎಂದು ಭಾವಿಸಿ ಸರಕಾರ ಹೊಸ ಹೊಸದಾಗಿ ಬರುವ ತಳಿಗಳು ರೋಗರಹಿತವಾದ ತಳಿಗಳನ್ನು ಸಾಕಬೇಕಾಗಿದೆ; ಇವತ್ತು ಅದು ಆಗುತ್ತಾ ಇಲ್ಲ. ರೀಸರ್ಚ್ ಮಾಡುವುದಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚಾದರೂ ಕೂಡ, ಚಿಂತೆ ಇಲ್ಲ. ಪ್ರಪಂಚದಲ್ಲಿ ಅತಿ ಉನ್ನತರಾದಂಥ ತಜ್ಞರನ್ನು ಕರೆಸಿ ರೀಸರ್ಚ್ ಮಾಡುವುದಕ್ಕೆ ಅವಕಾಶ ಕೊಟ್ಟು, ರೇಷ್ಮೆ ಬೆಳೆ ಅಭಿವೃದ್ಧಿ ಮಾಡಬೇಕು ಎಂದು ಸೂಚನೆ ಕೊಟ್ಟು, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ಹಣಕಾಸಿನ ಸಚಿವರು ಮಂಡಿಸಿರತಕ್ಕ ಹೆಚ್ಚುವರಿ ಬೇಡಿಕೆಗಳನ್ನು ವಿರೋಧಿಸಿ, ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಸದನದ ಸದಸ್ಯರಾದಂಥ ಮಾನ್ಯ ಎಂ. ಎಸ್. ಕೃಷ್ಣನ್‌ರವರು ಹೇಳಿದರು : ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಯಾವಾಗಲೂ ಹೆಚ್ಚುವರಿ ಬೇಡಿಕೆಗಳು ಇರುತ್ತವೆ, ಇರುವುದಿಲ್ಲ ಎಂದಲ್ಲ. ಆದರೆ ಆಡಳಿತದಲ್ಲಿ ಹೆಚ್ಚಿಗೆ ಲೋಪದೋಷ ಕಂಡುಬಂದಾಗ ಆಡಳಿತ ಮಟ್ಟದಲ್ಲಿ ಬಿಗಿ ತಪ್ಪಿದಾಗ, ಅನೇಕ ಕೋಟಿ ರೂಪಾಯಿಗಳ ಹಣ, ಲಕ್ಷಾನುಗಟ್ಟಲೇ ಹಣ ಖರ್ಚಾಗತಕ್ಕ ಸಂದರ್ಭ ಬರುತ್ತದೆ. ಈ ಸಂದರ್ಭದಲ್ಲಿ ಹೆಚ್ಚುವರಿ ಬೇಡಿಕೆಗಳು ಮಿತಿಮೀರಿ ಹೋಗುತ್ತಿವೆ ಎನ್ನತಕ್ಕ ಮಾತನ್ನು ಅವರು ಸ್ಪಷ್ಟಪಡಿಸಿದರು. ಆ ಮಾತನ್ನು ನಾನು ಒಪ್ಪುತ್ತೇನೆ. ಮಾನ್ಯ ಘೋರ್ಪಡೆ

ಯವರು ಹಣಕಾಸಿನ ಸಚಿವರಾಗಿ ಎರಡು ವರ್ಷ ಕಳೆಯಿತು. ತಾವು ಮಂತ್ರಿಗಳಾಗಿ ಅರ್ಥಶಾಖೆಯನ್ನು ವಹಿಸಿಕೊಂಡು ಎರಡು ವರ್ಷ ಕಳೆಯಿತು. ತಾವು ಹೇಳಿದ್ದೀರಿ, ನಾನು ನಿಜವಾಗಲೂ ಹೊಸ ನಮೂನೆಯ ಬಡ್ಜೆಟ್ ಇಡುತ್ತೇನೆ, ಬಡವರಿಗೆ ಸಹಾಯ ಮಾಡುತ್ತೇನೆ, ಬಡ ಜನರಿಗೆ ಸೌಕರ್ಯ ಮಾಡುತ್ತೇನೆ ಎಂದು. ಇವತ್ತು ನಿಜವಾಗಿ ಗರೀಬಿ ಹಟಾವೋ ನೆನಪು ಬಂದಿದೆ. ಹಿಂದೆ ತಾವು ಹೇಳಿರತಕ್ಕ ಮಾತಿನಲ್ಲಿ ನಮಗೆ ನಂಬಿಕೆ ಬಂದಿತು. ಈ ದೇಶದಲ್ಲಿರತಕ್ಕ ಬಡವರ ಬಗ್ಗೆ ಗಮನ ಕೊಟ್ಟು, ಹಣ ಮಧ್ಯೆ ಸೋರಿಹೋಗದ ಹಾಗೆ ತಾವು ನೋಡುತ್ತೀರಿ ಎನ್ನುವ ಅಭಿಪ್ರಾಯ ನಮ್ಮೆಲ್ಲರಿಗೂ ಇತ್ತು. ಮಾನ್ಯ ಘೋರ್ಪಡೆಯವರು ಸಾಲ ತೀರಿಸತಕ್ಕ ಬಗ್ಗೆ ಮತ್ತು ಓವರ್‌ಡ್ರಾಫ್ಟ್ ಇದ್ದು, ಹೊರೆ ಆಯಿತು, ವಿಪರೀತವಾಯಿತು ಎಂದು ಹಲವಾರು ಸಾರಿ ಈ ಸದನದಲ್ಲಿ ಹೇಳಿದ್ದಾರೆ. ಚರ್ಚೆಯಾಗಿದೆ. ಅದನ್ನು ಪುನರುಚ್ಚಾರ ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ತಾವು ಹಣಕಾಸಿನ ಶಾಖೆಯನ್ನು ವಹಿಸಿಕೊಂಡ ಮೇಲೆ ನಮಗೆ ತಮ್ಮ ಮೇಲೆ ಅಪಾರವಾದ ನಂಬಿಕೆ ಇತ್ತು. ಘೋರ್ಪಡೆಯವರು ಆರ್ಥಿಕ ವಿಷಯದಲ್ಲಿ ಚೆನ್ನಾಗಿ ಓದಿಕೊಂಡಿದ್ದಾರೆ, ಪರಿಣಿತರು. ಇಲಾಖೆಗಳು ಮಾಡತಕ್ಕ ವ್ಯವಹಾರಗಳಿಗೆ ಸ್ವಲ್ಪ ಲಂಗುಲಗಾಮು ಹಚ್ಚಿ ಹಿಡಿತದಲ್ಲಿ ಇಟ್ಟುಕೊಳ್ಳುತ್ತಾರೆ ಎಂಬ ಅಪಾರವಾದ ನಂಬಿಕೆ ಈ ಸದನದಲ್ಲಿ ಎಲ್ಲರಿಗೂ ಇತ್ತು. ನನಗೆ ಈಗ ಅನ್ನಿಸುತ್ತದೆ, ನಿಮಗೆ ಏನು ಹೆಸರು ಇಡಬೇಕು ಎಂದು. ಮಾನ್ಯ ಘೋರ್ಪಡೆಯವರು ಅರ್ಥ ಸಚಿವರಿದ್ದಾರೆ. ಅವರಿಗೆ ಯಾವ ಹೆಸರು ಇಡಬೇಕು ? ಅನರ್ಥಕ ಹಣ ಹೋಗಿ ಹೋಗಿ ಹಣಕಾಸಿನ ಪರಿಸ್ಥಿತಿಯ ಮೇಲೆ ಹಿಡಿತವನ್ನು ಇಟ್ಟುಕೊಳ್ಳತಕ್ಕಂಥ ಜವಾಬ್ದಾರಿಯುತವಾದ ಕೆಲಸ ನಿರ್ವಹಣೆ ಮಾಡುತ್ತಾರೆ ಎಂದು ನಂಬಿಕೆ ಇಟ್ಟಿದ್ದೆವು. ಆದರೆ ಇವತ್ತು ಇದು ಸತ್ಯಕ್ಕೆ ದೂರವಾದ ವಿಷಯ ಎಂದು ನಮಗೆಲ್ಲ ಗೊತ್ತಾಗಿದೆ. ನಾನು ೧೯೬೭ ರಿಂದ ನೋಡುತ್ತಿದ್ದೇನೆ. ತಮಗೆಲ್ಲ ಗೊತ್ತಿದೆ. ಹಿಂದಿನ ಸರಕಾರ ಇದ್ದಾಗ, ನಾವು ಯಾವ ಮಾತನ್ನು ಹೇಳುತ್ತಿದ್ದೇವೊ, ಅದೇ ಮಾತನ್ನು ನಿಮಗೂ ಹೇಳುತ್ತಿದ್ದೇವೆ. ನಿಮ್ಮ ಆರ್ಥಿಕ ನೀತಿ, ಹಿಂದಿನ ಸರಕಾರಕ್ಕೆ ಇದ್ದಂಥ ಆರ್ಥಿಕ ನೀತಿಗಿಂತ, ಬೇರೆ ಯಾವ ನೀತಿಯಾಗಿದೆ ಎನ್ನುವುದು ಮೂಲ ಪ್ರಶ್ನೆ. ಘೋರ್ಪಡೆಯವರು ಉತ್ತರ ಕೊಡಬೇಕು, ಹಿಂದಿನ ಆರ್ಥಿಕ ನೀತಿಗಿಂತಲೂ ನಿಮ್ಮದು ಸಮಾಜವನ್ನು ಕೊಂಡೊಯ್ಯತಕ್ಕ ದಾರಿಯಲ್ಲಿ, ಹೊಸ ಮಾರ್ಗವನ್ನು ಹಾಕಿಕೊಂಡಿದ್ದೇವೆ. ಅನಾವಶ್ಯಕವಾದಂಥ ಖರ್ಚನ್ನು ಕಡಿಮೆ ಮಾಡಿದ್ದೇವೆ ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಜನ ಮೆಚ್ಚತಕ್ಕ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ ಎನ್ನುವ ಮಾತಿನ ನಂಬಿಕೆಯನ್ನು ನಮಗೆ ತೋರ್ಪಡಿಸಿ ಕೊಡಬೇಕು ಎಂದು ಅಧ್ಯಕ್ಷರ ಮೂಲಕ ಕೇಳುತ್ತೇನೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಏನು ಇಟ್ಟಿದ್ದೀರಿ, ಅದನ್ನು ದಯವಿಟ್ಟು ಹಿಂದಿನ ಸರಕಾರ, ಅಂದರೆ ರಾಮಕೃಷ್ಣ ಹೆಗಡೆಯವರು ಇದ್ದಾಗ, ಜತ್ತಿಯವರಿದ್ದಾಗ, ನಿಜಲಿಂಗಪ್ಪನವರಿದ್ದಾಗ, ಏನೇನು ಹೆಚ್ಚುವರಿ ಬೇಡಿಕೆಗಳು ಬರುತ್ತಿತ್ತು, ಅವೆಲ್ಲ ಇಟ್ಟುಕೊಳ್ಳಿ, ತಮ್ಮದು ಕಳೆದ ವರ್ಷದ್ದು, ಈ ವರ್ಷದ್ದು ಇಟ್ಟುಕೊಳ್ಳಿ, ತಾವು ಪರಾಂಬರಿಸಿ. ಎಲ್ಲಿಯಾದರೂ ಒಂದು ಇಂಚು, ಅವರಿಗಿಂತ ಹೆಚ್ಚುವರಿ ಬೇಡಿಕೆಗಳ ವಿಷಯದಲ್ಲಾಗಲೀ, ಆಯ-ವ್ಯಯ ಪತ್ರವನ್ನು ತಯಾರು ಮಾಡತಕ್ಕ ನಮೂನೆಯಲ್ಲಾಗಲೀ ಮತ್ತು ದೇಶದ ಆರ್ಥಿಕ ಪರಿಸ್ಥಿತಿಯನ್ನು ಮೇಲ್ಮಟ್ಟಕ್ಕೆ ತರತಕ್ಕ ವಿಷಯದಲ್ಲಾಗಲೀ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ ಎನ್ನುವ ಗ್ಯಾರಂಟಿ ಕೊಡಿ. ಟೆರಿಬಲ್ ಓವರ್‌ಡ್ರಾಫ್ಟ್ ಇತ್ತು, ಅದರಿಂದ ತೊಂದರೆಯಾಯಿತು, ಅದನ್ನು ತೀರಿಸತಕ್ಕ ದೊಡ್ಡ ಜವಾಬ್ದಾರಿ ಹೊತ್ತಿದ್ದೇವೆ, ಆರನೇ ಆರ್ಥಿಕ ಆಯೋಗದವರು ೧೦-೧೫ ವರ್ಷಗಳ ಕಾಲ ಕೊಟ್ಟಿದ್ದಾರೆ ಎನ್ನತಕ್ಕ ಮಾತನ್ನು ತಮ್ಮ ಬಾಯಿಯಿಂದ ೮-೧೦ ಸಾರಿ ಕೇಳಿರಬಹುದು. ಇದು ಒಂದನ್ನು ಬಿಟ್ಟರೆ, ಯಾವ ರೀತಿ ಅನಗತ್ಯವಾದ ಖರ್ಚು ನಿಲ್ಲಿಸತಕ್ಕ ವಿಷಯದಲ್ಲಾಗಲೀ, ಇಲಾಖೆಗಳು ದುಂದುವೆಚ್ಚ ಮಾಡತಕ್ಕ ವಿಷಯದಲ್ಲಿ ಕಠಿಣವಾದ ಕ್ರಮ ತೆಗೆದುಕೊಂಡು ಆರ್ಥಿಕ ವಿಷಯದ ಮೇಲೆ ಕಡಿವಾಣ ಇಟ್ಟಿದ್ದೀರಿ ? ಇದಕ್ಕೆ ಸ್ಪಷ್ಟವಾದ ನೇರವಾದ ಉತ್ತರ ಕೊಡಬೇಕು. ಅನಾವಶ್ಯಕವಾದ ಖರ್ಚನ್ನು ನಿಲ್ಲಿಸುವುದಕ್ಕೆ, ದುಂದುವೆಚ್ಚ ನಿಲ್ಲಿಸುವುದಕ್ಕೆ ಯಾವ ರೀತಿ ಮಾಡಿದ್ದೀರಿ ? ಹಣ ಸೋರಿ ಹೋಗುವುದು ಅಲ್ಲಿ. ಅಧಿಕಾರಿಗಳ ಕೈಯಲ್ಲಿ ಅಧಿಕಾರ ಕೊಟ್ಟಿದ್ದೀರಿ; ಹಣ ಕೊಟ್ಟಿದ್ದೀರಿ. ಕಾನೂನು ಪ್ರಕಾರ ಅಧಿಕಾರ ಏನು ಕೊಟ್ಟಿದ್ದೀರಿ, ಅದರ ಸದುಪಯೋಗವಾಗಿದೆಯೋ ಅಥವಾ ದುರುಪಯೋಗವಾಗಿದೆಯೋ ಎಂದು ತಾವು ನೋಡಿ. ದುರುಪಯೋಗ ಆಗತಕ್ಕ ಸಂದರ್ಭ ಬಂದಾಗ ಕಾನೂನು ಪ್ರಕಾರ ಕ್ರಮತೆಗೆದುಕೊಳ್ಳುತ್ತೇವೆ ಎಂದು ನಿರ್ದಿಷ್ಟವಾದ ನಿಲುವನ್ನು ಅವರು ಏತಕ್ಕೆ ತೆಗೆದುಕೊಳ್ಳಬಾರದು ಎಂದು ಈ ಸಂದರ್ಭದಲ್ಲ ಕೇಳುತ್ತೇನೆ.

Demand No. 48 pertains to Palace office buildings of Mysore.

Item No. 1 Sanction was accorded for the acquisition of Mysore Palace Office Buildings with the grounds and gardens for the purpose of accommodating Government offices, at a cost of Rs. 15.00 lakhs in addition to 15% statutory solatium laid down and payable

under the Land Acquisition Act. Approval was also accorded to the payment of an advance of Rs. 11.00 lakhs towards the value of the properties pending final payment, subject to adjustment towards the compensation payable on the completion of the Land Acquisition proceedings.

ನಾನು ಇದರ ಬಗ್ಗೆ ಆಪಾದನೆ ಮಾಡುತ್ತೇನೆ. ಮೈಸೂರು ಪ್ಯಾಲೆಸ್ ಬಗ್ಗೆ ಮೈಸೂರಿನ ಮಾಜಿ ಮಹಾರಾಜರು ತಮ್ಮಲ್ಲಿರತಕ್ಕ, ಅರಮನೆಗಳನ್ನು ಮಾರತಕ್ಕ ವಿಷಯದಲ್ಲಿ ದೊಡ್ಡ ಕರ್ಮಕಾಂಡ ಆಗಿದೆ ಎನ್ನತಕ್ಕ ಮಾತು ದೇಶದಲ್ಲಿ ಸ್ಪಷ್ಟವಾಗಿ ಹರಡಿದೆ. ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಇದರ ಬಗ್ಗೆ ಪ್ರಶ್ನೆ ಎತ್ತಿದಾಗ ಮೈಸೂರಿನ ಮಾಜಿ ದೊರೆಗಳು ತಮಗೆ ಇಷ್ಟ ಬಂದ ರೀತಿಯಲ್ಲಿ ತಮ್ಮ ಸ್ವತ್ತನ್ನು ವಿಲೇವಾರಿ ಮಾಡುವುದಕ್ಕೆ ಹಕ್ಕು ಇದೆ ಎಂದು ಕೇಂದ್ರ ಸರಕಾರದ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಇದು ಸಮಾಜವಾದ ಮತ್ತು ಸಮಾಜವಾದದಲ್ಲಿ ನಂಬಿಕೆ ಇರತಕ್ಕ ಸರಕಾರದ ನಿಲುವು. ಹಿಂದೆ ಇದ್ದ ವೀರೇಂದ್ರ ಪಾಟೀಲ ಸರಕಾರವನ್ನು ಹೊಗಳುವುದಕ್ಕೆ ಏನು ಕಾರಣ ಇಲ್ಲ. ನಿಮ್ಮನ್ನು ಕೂಡ ತೆಗಳಬೇಕು ಎನ್ನುವ ಇಚ್ಛೆ ಇಲ್ಲ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದೊಡನೆ ನಡೆದಿರುವ ಸುಧೀರ್ಘವಾದ ಪತ್ರ ವ್ಯವಹಾರದಿಂದ ಈ ನಿಲುವು ಸ್ಪಷ್ಟವಾಗಿದೆ. ಮೈಸೂರಿನ ಅರಮನೆಯನ್ನು ಮಾರುವುದಕ್ಕೆ ಮಾಜಿ ಮಹಾರಾಜರುಗಳಿಗೆ ಹಕ್ಕು ಇಲ್ಲ ಎನ್ನುವ ಪ್ರಶ್ನೆ ಬಂದಾಗ, ಮೈಸೂರಿನ ಅರಮನೆಗಳನ್ನು ಮಾರುವುದಕ್ಕೆ ಪರವಾನಿಗೆ ಕೊಡುವುದು ಮಾತ್ರವಲ್ಲ, ಅಕ್ವಿಸಿಶನ್ ಆ್ಯಕ್ಟ್ ಪ್ರಕಾರ ಗವರ್ನ್‌ಮೆಂಟ್ ಆಫೀಸ ಹೌಸ ಮಾಡುವುದಕ್ಕೆ ೧೫ ಲಕ್ಷ ರೂಪಾಯಿಗಳನ್ನು ಮತ್ತು ೧೫ ಪರಸೆಂಟ್ ಸೊಲೇಸಿಯಂ ತಾವು ಕೊಟ್ಟು ಮಾಜಿ ಮಹಾರಾಜರಿಗೆ ನಮ್ಮ ಸರಕಾರದ ಹಣ ಹೋಗಿ ಸೇರುತ್ತದೆ. ಇವೊತ್ತು ಪ್ಯಾಲೇಸ್ ಇರಲಿ ಸಂಬಂಧಪಟ್ಟ ಗಾರ್ಡನ್ ಇರಲಿ, ಅದೆಲ್ಲಾ ಮಾಜಿ ಮಹಾರಾಜರುಗಳ ಆಸ್ತಿ ಎಂದು ಮರೆಯಬಾರದು. ಈ ಒಂದು ನಿಲುವನ್ನು ತೆಗೆದುಕೊಂಡಿದ್ದರೆ, ಮಾಜಿ ಮಹಾರಾಜರುಗಳಿಗೆ ಸೇರಿರತಕ್ಕ ಆಸ್ತಿ ಇರಲಿ, ಅರಮನೆ ಇರಲಿ, ಹೂವಿನ ತೋಟ ಇರಲಿ, ಅದು ಒಂದು ಇಂಚೂ ಕೂಡ ಜನತೆ ಸ್ವತ್ತು. ಮಹಾರಾಜರೇ ಸ್ವಂತ ದುಡಿದು ತಮ್ಮ ಹಣದಿಂದ ಆ ಬಿಲ್ಡಿಂಗ್ ಕಟ್ಟಲಿಲ್ಲ. ಸಮಾಜವಾದದಲ್ಲಿ ನಿಮಗೆ ನಂಬಿಕೆ ಇದ್ದರೆ, ಅದು ಅಕ್ವೈರ ಮಾಡತಕ್ಕ ಸ್ವತ್ತು, ಮಾಜಿ ಮಹಾರಾಜರ ಸ್ವತ್ತು, ಅಂದಮೇಲೆ ಅಕ್ವೈಯರ ಮಾಡುವುದಕ್ಕೆ ನಮ್ಮ ಹಣ ಕೊಡುತ್ತಿದ್ದೀರಿ. ಆದರ ಜೊತೆಗೆ ೧೫ ಪರಸೆಂಟ್ ಸೊಲೇಸಿಯಂ ಸೇರಿಸಿ ಕೊಡುತ್ತಿದ್ದೀರಿ ಅದು ಯಾರ ಸ್ವತ್ತು ? ಜನತೆ ಸ್ವತ್ತು. ಜನತೆಯ ಸ್ವತ್ತನ್ನು ಲ್ಯಾಂಡ ಅಕ್ವಿಸಿಷನ್ ಆ್ಯಕ್ಟ್ ಪ್ರಕಾರ ಅಕ್ವೈಯರ ಮಾಡುವುದಕ್ಕೆ ಏನು ಕಾರಣ ಎಂದು ನೇರವಾದ ಪ್ರಶ್ನೆಯನ್ನು ಸರಕಾರಕ್ಕೆ ಕೇಳುತ್ತೇನೆ. ಆದಕ್ಕೆ ತಾವು ಉತ್ತರ ಕೊಡಬೇಕು. ಮಾಜಿ ಮಹಾರಾಜರ ಸ್ವತ್ತು ಜನರ ಸ್ವತ್ತು ಅದನ್ನು ಅವರ ಖಾಸಗಿ ಸ್ವತ್ತು ಎಂದು ಪರಿಗಣಿಸಿ, ಸಂಪೂರ್ಣವಾಗಿ ಲ್ಯಾಂಡ ಅಕ್ವಿಸಿಷನ್ ಕಾಲಮಿನ ಪ್ರಕಾರ ಅಕ್ವೈಯರ್ ಮಾಡಿಕೊಳ್ಳುತ್ತೇವೆಂದು ಈ ಒಂದು ನಿಳುವನ್ನು ಈ ಸಭೆಯ ಮುಂದೆ ಇಡುವುದಾದರೆ ಸಮಾಜವಾದದ ಅರ್ಥ ಇಷ್ಟೇ ಎಂದು ನಿಮ್ಮ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಈ ದೃಷ್ಟಿಯಿಂದ ನನಗೆ ಅನಿಸುತ್ತದೆ, ಡಿಮ್ಯಾಂಡ್ ನಂ. ೪೮ ಎಕ್ಸ್‌ಪ್ಲನೇಟರಿ ನೋಟ್ ಕೆಳಗೆ ಇರುವ ಐಟಮ್ ನಂಬರ್ ಒಂದು ಬಹಳ ಅನ್ಯಾಯ. ಒಂದು ಪೈಸಾ ಕೂಡ ಕೊಡುವುದಕ್ಕೆ ಸರಕಾರಕ್ಕೆ ನೈತಿಕ ಹಕ್ಕು ಇಲ್ಲ, ಈ ಜನತೆಯ ಸ್ವತ್ತಿಗೆ ಹಣ ಕೊಡುವುದಕ್ಕೆ ನಾವು ತಯಾರು ಇಲ್ಲ. ಸರಕಾರದವರು ಆ ಸ್ವತ್ತಿಗೆ ಮುಟ್ಟುಗೋಲು ಹಾಕಿ ಅದನ್ನು ಗವರ್ನ್‌ಮೆಂಟ್ ಹೌಸ್ ಮಾಡಿ ಈಗ ಕೊಡುತ್ತಿರುವ ಬಾಡಿಗೆಯನ್ನು ಉಳಿಸಬೇಕೆಂದು ಇಚ್ಛೆಪಡುತ್ತೇನೆ.

ಉಳಿದಿರತಕ್ಕ ಬೇಡಿಕೆಗಳ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಇಲ್ಲಿ ಹೆಚ್ಚುವರಿ ಬೇಡಿಕೆಗಳ ಒಂದು ದೊಡ್ಡ ಪಟ್ಟಿ ಇದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು. ಇದರಲ್ಲಿ ಅನ್‌ಫೋರ್‌ಸೀನ್ ಎಕ್ಸ್‌ಪೆಂಡಿಚರ್ ಏನು ಎಂದು ನಮಗೆ ಗೊತ್ತಾಗುವುದಿಲ್ಲ, ಸರಕಾರ ನಡೆಸತಕ್ಕ ಸಂದರ್ಭದಲ್ಲಿ ಕೆಲವು ಬರುತ್ತವೆ. ಆದರೆ ಇದು ಮಿತಿಮೀರಿ ಹೋಗಿರತಕ್ಕ ಹೆಚ್ಚುವರಿ ಬೇಡಿಕೆ ಎನ್ನುವ ಮಾತನ್ನು ಸಭೆಯ ಮುಂದೆ ಇಡುತ್ತೇನೆ. ಈ ಎರಡು ಮಾತುಗಳನ್ನು ಹೇಳುವುವರ ಮೂಲಕ ಹೆಚ್ಚುವರಿ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ, ಮತ್ತು ಹಾಗೂ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸಭಾಧ್ಯಕ್ಷರೇ, ನಾನು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದಾಗಿ ಈ ರೇಷ್ಮೆ ಉತ್ಪನ್ನಕ್ಕೆ ಒಂದು ಹೆಚ್ಚಿನ ಬೇಡಿಕೆಯನ್ನು ಕೇಳಿದ್ದಾರೆ. ಈಗ ಈ ರೇಷ್ಮೆ ಬೆಲೆ ಬಹಳ ದುಬಾರಿಯಾಗಿರುವುದರಿಂದ ಅನೇಕ ನೇಕಾರರಿಗೆ ತೊಂದರೆಯಾಗಿರುವುದರ ಜೊತೆಗೆ ಸಾಮಾನ್ಯ ಜನ

ಮದುವೆ ಮುಂತಾದ ಕಾಲದಲ್ಲಿ ರೇಷ್ಮೆ ಬಟ್ಟೆ ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಯಾಗಿದೆ. ಮೊದಲನೆಯದಾಗಿ ರೇಷ್ಮೆ ಬೆಳೆ ಬೆಳೆಯುತಕ್ಕ ಬೇಸಾಯಗಾರನಿಗೂ ಹೆಚ್ಚಿನ ಪ್ರಯೋಜನ ಆಗುತ್ತಾ ಇಲ್ಲ. ಕೂಲಿಗಾರರಿಗೆ; ನೇಕಾರರಿಗೆ ಹೆಚ್ಚಿನ ಅನುಕೂಲ ಆಗುತ್ತಾ ಇಲ್ಲ. ಮಧ್ಯವರ್ತಿ ಜನ ಬೆಲೆಗಳು ಬಹಳ ಏರು ಹಾಗೆ ಮಾಡಿ ಬಹಳ ಲಾಭ ಪಡೆಯುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ, ಮತ್ತು ಇದರಿಂದ ನೇಕಾರರಿಗೂ, ರೇಷ್ಮೆ ಬಟ್ಟೆ ಉಪಯೋಗಿಸುವವರಿಗೂ ಹೆಚ್ಚಿನ ತೊಂದರೆಯಾಗುತ್ತಾ ಇದೆ. ಅದನ್ನು ತಾಂತ್ರಿಕ ಹಾಗೂ ಟ್ರೈನಿಂಗ್‌ಗೆ ಬಹಳವಾಗಿ ಬೇಡಿಕೆಗಳನ್ನು ಕೇಳಿದ್ದಾರೆ. ನಾವು ಅನೇಕ ಸಾರಿ ಒತ್ತಾಯ ಮಾಡಿದರೂ ಕೂಡ ನಮ್ಮಲ್ಲಿ ತರಪೇತು ನಡೆದು ಸರಿಯಾದ ಶಿಕ್ಷಣವನ್ನು ಉಳ್ಳಂಥ ಕನ್ನಡಿಗರಿಗೆ ಕೆಲಸ ದೊರೆಯುತ್ತಾ ಇಲ್ಲ. ಆದುದರಿಂದ ಕೇಂದ್ರ ಕೈಗಾರಿಕಾ ಸಂಸ್ಥೆಗಳು ಹಾಗೂ ಕೇಂದ್ರದ ಆಫೀಸುಗಳಲ್ಲಿ ಹೆಚ್ಚು ಭಾಗ ಕನ್ನಡ ಜನಗಳಿಗೆ ಒಂದು ಅವಕಾಶ ಸಿಗುವುದಕ್ಕೆ ಒಂದು ತೀವ್ರವಾದಂಥ ಯೋಜನೆಯನ್ನು ಸರಕಾರ ಮಾಡಬೇಕು.

ಇಡೀ ರಾಷ್ಟ್ರದಲ್ಲಿ ಒಂದು ನೀತಿ ಇದ್ದ ಪಕ್ಷದಲ್ಲಿ ಅದರ ಬಗ್ಗೆ ನಾನು ಹೇಳುತ್ತಾ ಇರಲಿಲ್ಲ. ಮಹಾರಾಷ್ಟ್ರದಲ್ಲಿ, ತಮಿಳುನಾಡಿನಲ್ಲಿ ಹೀಗೆ ಅನೇಕ ರಾಜ್ಯದಲ್ಲಿ ಯುವಕರಿಗೆ ಕೆಲಸಗಳನ್ನು ಒದಗಿಸುವ ನೀತಿ ಇರುವಾಗ ನಮ್ಮ ರಾಜ್ಯದಲ್ಲೂ ಕೈಗಾರಿಕೆಗಳಲ್ಲಿ ಅವಕಾಶ ಒದಗಿಸಿಕೊಡುತ್ತೀರಾ ? ಮತ್ತು ಪವರ್ ಒದಗಿಸಿಕೊಡುತ್ತೀರಾ ? ಮತ್ತು ಹಣದ ಸಹಾಯವನ್ನು ಒದಗಿಸಿಕೊಡುತ್ತೀರಾ ? ಈ ಸಂದರ್ಭದಲ್ಲಿ ಕನ್ನಡಿಗರಿಗೇ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು ಹೇಳುತ್ತೇನೆ. ಆ ರೀತಿ ಕೊಡುವುದಕ್ಕೆ ಏನು ತೊಂದರೆಯಾಗಿದೆ ಎನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡಿ, ಕೇಂದ್ರದ ಕೈಗಾರಿಕೆ ಮತ್ತು ಬೇರೆ ಬೇರೆ ಕೈಗಾರಿಕೆಗಳಲ್ಲಿ, ರಿಜರ್ವ ಬ್ಯಾಂಕ ಗಳಲ್ಲಿ ಕಡ್ಡಾಯವಾಗಿ ಕನ್ನಡಿಗರಿಗೇ, ಅದರಲ್ಲೂ ಅರ್ಹತೆ ಇರುವ ಕನ್ನಡಿಗರಿಗೇ ಪ್ರಾಧಾನ್ಯತೆಯನ್ನು ಕೊಡಬೇಕೆಂದು ಒತ್ತಾಯ ಮಾಡಬೇಕೆಂದು ಪ್ರಸ್ತಾಪ ಮಾಡುತ್ತೇನೆ. ಮತ್ತೆ ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಯಲ್ಲಿ ಒಂದು ಕಡೆ ಪಾನ ನಿರೋಧವನ್ನು ತೆಗೆದು ಹಾಕಿ ಹೆಚ್ಚು ಜನ ಕುಡಿಯುವುದಕ್ಕೆ ಅವಕಾಶ ಮಾಡಿಕೊಟ್ಟು ಮತ್ತೊಂದು ಕಡೆ ಟೆಂಪರೆನ್ಸ್ ಬೇಡಿಕೆಯನ್ನು ಇಟ್ಟಿದ್ದೀರಿ. ಟೆಂಪರೆನ್ಸ್‌ನಲ್ಲಿ ಎಷ್ಟು ಜನ ಕುಡಿಯುವುದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಸಂಬಂಧಪಟ್ಟ ಅಂಕಿಅಂಶಗಳನ್ನು ಒಂದು ಪ್ರಸ್ತಾಪನೆ ಮಾಡಿ ಅದರ ಬಗ್ಗೆ ತನಿಖೆ ಮಾಡಿ ಹೆಚ್ಚು ಟೆಂಪರೆನ್ಸ್‌ಗೆ ದುಡ್ಡು ಖರ್ಚುಮಾಡುವುದರಿಂದ ಪ್ರಯೋಜನವಾಗುತ್ತದೆಯೋ ಎನ್ನುವ ಬಗ್ಗೆ ಒಂದು ವರದಿಯನ್ನು ತಯಾರು ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಸರ್ಕಾರದ ನೀತಿ ಪ್ರಕಾರ ಅನೇಕ ಜಮೀನ್ದಾರರಿಂದ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಆಯಿತು. ಆದರೆ ೧೦–೧೨ ವರ್ಷಗಳಾದರೂ ಕೂಡ ಅವರಿಗೆ ನ್ಯಾಯವಾದಂಥ ಹಣವನ್ನು ಬರಬೇಕಾಗಿತ್ತೋ ಅದು ಬರಲಿಲ್ಲ ಎಂದು ಅನೇಕರು ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಿದ್ದಾರೆ. ಸರ್ಕಾರದವರು ಏನು ಜಮೀನನ್ನು ಅವರಿಂದ ತೆಗೆದುಕೊಂಡಿದ್ದಾರೆ. ಅದಕ್ಕೆ ಅವರಿಗೆ ಕೊಡಬೇಕಾದ ಪರಿಹಾರವನ್ನು ಆದಷ್ಟು ಬೇಗ ಕೊಡುವುದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹೈಕೋರ್ಟಿನವರು ಒಂದು ಬೇಡಿಕೆಯನ್ನು ಕೇಳಿದ್ದಾರೆ. ಹೈಕೋರ್ಟ್ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಅನೇಕ ಕೇಸುಗಳು ವರ್ಷಾನುಗಟ್ಟಲೇ ಅದರೂ ಕೂಡ ತೀರ್ಮಾನವಾಗದೆ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಕೇಸುಗಳು ತೀರ್ಮಾನವಾಗದೆ ಮುಂದುವರಿಯುತ್ತಿರುವುದರಿಂದ ಅನೇಕರು ತಮ್ಮ ಕೇಸುಗಳ ಬಗ್ಗೆ ವ್ಯಾಕುಲಪಡುತ್ತಿದ್ದಾರೆ. ಈ ಬಗ್ಗೆ ಪ್ರಧಾನ ಹೈಕೋರ್ಟ್ ಜಡ್ಜ್ ಯಾರು ಇದ್ದಾರೋ ಅವರ ಜೊತೆಯಲ್ಲಿ ಮಾತುಕತೆ ನಡೆಸಿ ಈಗಿರತಕ್ಕ ಹಳೆಯ ಕೇಸುಗಳನ್ನು ಆದಷ್ಟು ಬೇಗ ಪರಿಹಾರ ಮಾಡಿದರೆ ಅನೇಕ ಕಕ್ಷಿಗಾರರಿಗೆ ಅನುಕೂಲವಾಗುತ್ತದೆ. ಅವರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಮತ್ತು ಈ ಸಾರಿ ನಮ್ಮ ಬಜೆಟ್‌ನಲ್ಲಿ ಪೆನ್‌ಷನ್‌ದಾರರ ಬಗ್ಗೆ ಸ್ವಲ್ಪ ಸಹಾಯ ಮಾಡಬೇಕು ಎನ್ನುವ ಪ್ರಸ್ತಾಪನೆ ನಮ್ಮ ಅರ್ಥ ಸಚಿವರು ಹೇಳಿದ್ದಾರೆ. ಆದರೆ ಸಾಮಾನುಗಳ ಬೆಲೆ ಏರುತ್ತಾ ಇರುವಾಗ ಅವರಿಗೆ ಕೊಡತಕ್ಕ ಒಂದು ಸಣ್ಣ ಹೆಚ್ಚುವರಿ ಏನು ಇದೆಯೋ ಅದು ಬಹಳ ತಾರತಮ್ಯವಿದೆ, ಇದರಲ್ಲಿ ಅನೇಕ ಪೆನ್‌ಷನ್‌ದಾರರ ಕೇಸುಗಳು ಸೆಟಲ್ ಆಗಲಿಲ್ಲ ಎನ್ನುವ ದೂರು ಮತ್ತು ಪೆನ್‌ಷನ್‌ದಾರರಿಗೆ ಸಹಾನುಭೂತಿ ಹೆಚ್ಚಿನ ರೀತಿಯಲ್ಲಿ ಸರ್ಕಾರದವರು ತೋರಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ ಎನ್ನತಕ್ಕ ವಿಷಯವನ್ನು ಅನೇಕ ನಿವೃತ್ತರು ಬಹಳ ವ್ಯಥೆಯಿಂದ ಹೇಳುತ್ತಿದ್ದಾರೆ. ಅದರ ಬಗ್ಗೆ ಇನ್ನು ಹೆಚ್ಚಿನ ಸಹಾಯ ದೊರೆಯುವ ಹಾಗೆ ಯೋಚನೆ ಮಾಡಬೇಕು.

ಇನ್ನು ಮಾನ್ಯ ಕೃಷ್ಣನ್‌ರವರು ಹಾಗೂ ಬಂಗಾರಪ್ಪನವರು ಹೇಳಿದ ಹಾಗೆ ಪದೇ ಪದೇ ಸಪ್ಲಿಮೆಂಟರಿ ಬಜೆಟ್‌ಗಳನ್ನು ಈ ಮನೆಯ ಮುಂದೆ ಇಡುವುದು ಉತ್ತಮವಾದುದು ಅಲ್ಲ, ಬಜೆಟ್‌ನ್ನು

ತಯಾರು ಮಾಡಿ, ಒಂದೂವರೆ ತಿಂಗಳು ಕಾಲ ಚರ್ಚೆಮಾಡಿ ಇಟ್ಟಂಥ ಬಡ್ಜೆಟ್‌ನಲ್ಲಿ ಅನೇಕ ಬದಲಾವಣೆಗಳು ಆಗಬೇಕಾದರೆ ಈ ಬಡ್ಜೆಟ್‌ನಲ್ಲಿ ಸೂಚಿಸಿರತಕ್ಕದ್ದು ಸರಿಯಾದಂಥ ರೀತಿಯಲ್ಲಿ ಖರ್ಚಾಗಿಲ್ಲ, ಯಾವುದಾದರೂ ಡಿಪಾರ್ಟ್‌ಮೆಂಟಿನಲ್ಲಿ, ಇಲ್ಲಿ ಹೇಳಿರುವುದಕ್ಕಿಂತ ಹೆಚ್ಚು ಖರ್ಚು ಮಾಡುವಂಥ ಪರಿಸ್ಥಿತಿ ಒದಗದೇ ಸರಿಯಾಗಿ ಎಚ್ಚರಿಕೆ ಕೊಟ್ಟು ಸಕಾಲದಲ್ಲಿ ಬಡ್ಜೆಟ್‌ದಲ್ಲಿ ಹಣವನ್ನು ಒದಗಿಸಿರುವುದನ್ನು ಖರ್ಚು ಮಾಡಬೇಕು. ಆಗಿಂದಾಗ್ಗೆ ಸಪ್ಲಿಮೆಂಟರಿ ಬಡ್ಜೆಟ್ ಮನೆಯ ಮುಂದೆ ಇಡುವುದನ್ನು ಸ್ವಲ್ಪ ಕಡಿಮೆಮಾಡಿ ಅನಿವಾರ್ಯವಾಗಿ ಬರುವುದಕ್ಕೆ ಮಾತ್ರ ಅವಕಾಶ ಮಾಡಿಕೊಡಬೇಕು. ಹೋಲ್ ಸೇಲ್ ಬಡ್ಜೆಟ್‌ನ್ನು ಯಾವತ್ತೋ ಹಾಕತಕ್ಕ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಕೊಡತಕ್ಕದ್ದು ಸರಿಯಾದ ಒಂದು ಬೇಡಿಕೆಯಲ್ಲ. ಜನತಾ ಬಜಾರ್, ಸೆಂಟ್ರಲ್ ಹೋಲ್‌ಸೇಲ್ ಸ್ಟೋರ್ಸ್ ಬಗ್ಗೆ ಒಂದು ಬೇಡಿಕೆ ಇಟ್ಟಿದ್ದಾರೆ. ರಾಜ್ಯದಲ್ಲಿ ಕೆಲವು ಜನತಾ ಬಜಾರ್‌ಗಳನ್ನು ಬಿಟ್ಟರೆ ಹೆಚ್ಚಿನ ಭಾಗ ಹೋಲ್‌ಸೇಲ್ ಸ್ಟೋರ್ಸ್‌ಗಳು ಮುಚ್ಚತಕ್ಕ ಪರಿಸ್ಥಿತಿ ಬಂದಿದೆ. ಇದು ಏತಕ್ಕೆ ಹೀಗೆ ಆಯಿತು ಎನ್ನುವ ಬಗ್ಗೆ ವಿವರಣೆಯನ್ನು ತಯಾರು ಮಾಡಿ ಜನಗಳಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಸೆಂಟ್ರಲ್ ಸ್ಟೋರ್ಸ್‌ಗಳು ಇರಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಕೊಯಮತ್ತೂರಿನಲ್ಲಿ ಚಿಂತಾಮಣಿ ಸ್ಟೋರ್ಸ್ ಎಂದು ಒಂದು ಹೋಲ್‌ಸೇಲ್ ಸ್ಟೋರ್ಸ್ ಇದೆ. ಅದು ಇಡೀ ಭಾರತದಲ್ಲಿಯೇ ಅತಿ ಉತ್ತಮವಾದ ಸೆಂಟ್ರಲ್ ಸ್ಟೋರ್ಸ್ ಎಂದು ಹೇಳುತ್ತಾರೆ. ಆ ಸ್ಟೋರ್ಸ್‌ಗೆ ಸರ್ಕಾರದ ಮುಖಾಂತರ ಯಾರನ್ನಾದರೂ ಕಳುಹಿಸಿ ಕೊಟ್ಟು ಹೇಗೆ ನಡೆಯುತ್ತಿದೆ, ಹೇಗೆ ಜನಸೇವೆಯನ್ನು ಸಲ್ಲಿಸುತ್ತಿದ್ದಾರೆ, ಹೇಗೆ ಹೆಚ್ಚು ಲಾಭದಾಯಕವಾಗುತ್ತಿದೆ ಎನ್ನುತಕ್ಕದ್ದನ್ನು ನೋಡಿಕೊಂಡು ಬಂದರೆ, ಜನತಾ ಸ್ಟೋರ್ಸ್‌ಗಳು, ಸೆಂಟ್ರಲ್ ಹೋಲ್ ಸೇಲ್ ಸ್ಟೋರ್ಸ್‌ಗಳು ಯಾವರೀತಿ ನಡೆಯುತ್ತಿದೆ, ಹೇಗೆ ನಷ್ಟವನ್ನು ಅನುಭವಿಸುತ್ತಿವೆ ಎಂಬುದರ ಬಗ್ಗೆ ಒಂದು ತನಿಖೆಯನ್ನು ಮಾಡಿದರೆ ಉತ್ತಮವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪೋಲೀಸ್ ಬಗ್ಗೆ ವರ್ಷೇವರ್ಷ ಕೂಡ ಪೋಲೀಸ್ ಬೇಡಿಕೆ ಆಗುತ್ತಲೇ ಇದೆ. ಪೋಲೀಸ್ ಬೇಡಿಕೆ ಬಗ್ಗೆ ಇಷ್ಟು ಮಾತ್ರ ಹೇಳಬಲ್ಲೆ. ಈಗ ಪೋಲೀಸ್ ಸಂಖ್ಯೆ ಹೆಚ್ಚಾಗುತ್ತಿದೆ. ಹಾಗೆಯೇ ಕ್ರೈಮ್ಸ್ ಮತ್ತು ಮರ್ಡರ್ಸ್ ಹೆಚ್ಚಾಗುತ್ತಾ ಇದೆ, ಇದು ಏತಕ್ಕೆ ? ಅನೇಕ ಮರ್ಡರ್ಸ್ ಕೇಸ್‌ಗಳನ್ನು ಪತ್ತೆ ಮಾಡುವದಕ್ಕೆ ಸಾಧ್ಯವಾಗುತ್ತಾ ಇಲ್ಲ ಎಂದು ಹೇಳುತ್ತಾರೆ. ಇನ್ನೊಂದು ಕಾರಣದಿಂದ ಪೋಲೀಸ್ ಅವಶ್ಯಕತೆ ಹೆಚ್ಚಾಗಿದೆ. ಏತಕ್ಕೆಂದರೆ ಆಡಳಿತ ನಡೆಸತಕ್ಕವರು ಸರಿಯಾದ ರೀತಿಯಲ್ಲಿ ಒಂದು ನೀತಿ ನಿಯಮ ಇಟ್ಟುಕೊಂಡು ಮಾಡದೇ ಇದ್ದಾಗ ಅನೇಕ ಕಡೆ ಗಲಭೆಗಳು ಆಗುತ್ತವೆ. ಹೆಚ್ಚು ಗಲಭೆ, ಲೂಟಿ, ಆದಾಗ ಅಪೋಜಿಷನ್‌ನವರಿಂದ ಪ್ರಚೋದನೆ ಆಗಿದೆ ಎನ್ನತಕ್ಕ ಒಂದು ಲೇಮ್ ಎಕ್ಸ್‌ಕ್ಯೂಜ್ ಅನೇಕ ಸಂದರ್ಭಗಳಲ್ಲಿ ಹೇಳುತ್ತಾರೆ. ಆದರೆ ಇದಕ್ಕೆ ಆಡಳಿತ ಪಕ್ಷದವರೇ ಕಾರಣ ಅಲ್ಲವೇ ಎನ್ನುವ ಬಗ್ಗೆ ಸರ್ಕಾರ ಒಂದು ದೀರ್ಘವಾದ ಯೋಚನೆ ಮಾಡಬೇಕಾಗಿದೆ. ಬೇರೆಯವರನ್ನು ದೂಷಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಸಮಸ್ಯೆ ಬಗೆಹರಿಯಬೇಕಾದರೆ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವವರೆಗೆ ಈ ಖಾತೆಯಲ್ಲಿ ದೋಷಗಳು ಇದ್ದೇ ಇರುತ್ತದೆ. ಇವತ್ತಿನ ದಿವಸ ಏನಾಗಿದೆ ಎಂದರೆ, ಎಲ್ಲಿಯಾದರೂ ಒಂದು ಕಡೆ ಗಲಾಟೆ ಆಗುತ್ತಿದ್ದರೆ, ಆ ದಿವಸದ ಪೇಪರ್ ತೆಗೆದು ನೋಡಿ, ಅಲ್ಲಿ ಗುಂಡು ಹಾರಿಸಲಾಯಿತು, ಲೂಟಿ ಮಾಡಲಾಯಿತು, ಲಾಟಿ ಚಾರ್ಜ್ ಮಾಡಲಾಯಿತು ಎಂದು ಬಂದಿರುವುದನ್ನು ಅನೇಕ ಸಂದರ್ಭಗಳಲ್ಲಿ ನೋಡುತ್ತಿರುತ್ತೇವೆ. ಆಡಳಿತ ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಅದರಿಂದ ತೊಂದರೆಗಳು ಆಗುತ್ತಿವೆ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು.

ಸರ್ಕಾರದ ಸಾಲಗಳ ಬಗ್ಗೆ ಬೇರೆ ಹೇಳಬೇಕಾಗಿದೆ, ಇದರಿಂದ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ. ಸೆಂಟ್ರಲ್ ಗೌವರ್ನಮೆಂಟಿನವರಿಗೆ ಕೂಡಬೇಕಾದ ಇಂಟ್ರೆಸ್ಟ್ ೭೫ ಲಕ್ಷ ರೂಪಾಯಿ ಹಾಕಿದ್ದಾರೆ. ದುಡ್ಡು ಖರ್ಚು ಮಾಡಿದ್ದಾಗ್ಯೂ ಪ್ರತಿಫಲ ದೊರೆಯದೇ ಇರತಕ್ಕ ಅನೇಕ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಸಾರ್ವಜನಿಕ ಹಿತ ದೃಷ್ಟಿಯಲ್ಲಿ ಇವನ್ನು ಮಾಡಿಲ್ಲ. ಇದರಿಂದ ಸರ್ಕಾರದ ಬೊಕ್ಕಸದಲ್ಲಿ ಹೆಚ್ಚು ದುಡ್ಡು ಇರಲಾರದಂಥ ಪರಿಸ್ಥಿತಿ ಬರುತ್ತಿದೆ. ಆದುದರಿಂದ ಇದರ ಬಗ್ಗೆ ಯೋಚನೆ ಮಾಡಿ ಸರ್ಕಾರದವರು ಸಾರ್ವಜನಿಕರು ಹಣವನ್ನು ಸಾರ್ವಜನಿಕರಿಗೆ ಹೆಚ್ಚು ಉಪಯೋಗವಾಗುವ ರೀತಿಯಲ್ಲಿ ಹೇಗೆ ಖರ್ಚು ಮಾಡಬೇಕೆಂದು ಯೋಚನೆ ಮಾಡಬೇಕೆಂದು ಕೆಲವು ಸ್ನೇಹಿತರು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಆದಷ್ಟು ಜಾಗ್ರತೆ ಸರ್ಕಾರ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ, ಯಾವರೀತಿ ದುಡ್ಡನ್ನು ಉಪಯೋಗಿಸಬೇಕು ಎನ್ನುವ ಬಗ್ಗೆ ಯೋಚನೆ ಮಾಡಿ ಪದೇ ಪದೇ ಸಪ್ಲಿಮೆಂಟರಿ ಬಡ್ಜೆಟ್ ಬರದ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಕೊನೆಯ ಸಲಹೆ ಕೊಟ್ಟು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ): ಸನ್ಮಾನ್ಯ ಅಧ್ಯಕ್ಷರೆ, ಈಗ ತಾನೇ ನನ್ನ ಮಿತ್ರರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಅಡಿಕೆ ಫೆಡರೇಷನ್ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ಬಹುಶಃ ಅವರು ಪೂರ್ತಿ ಮಾಹಿತಿ ಇಲ್ಲದೆ ಹೇಳಿದ್ದಾರೆ. ನಾನು ತಿಳಿದುದನ್ನು ಹೇಳುತ್ತೇನೆ. ಈಪೊತ್ತಿನ ದಿವಸ ಮೈಸೂರು ರಾಜ್ಯದಲ್ಲಿ ಒಂದು ಅರೇಕಾ ಫೆಡರೇಷನ್ ಇರುವಾಗ ಇನ್ನೊಂದು ಫೆಡರೇಷನ್ ಏತಕ್ಕೆ ಮಾಡಿದ್ದು ಎನ್ನುವ ಪ್ರಶ್ನೆ ಕೇಳಿದ್ದಾರೆ. ಕಳೆದ ಎರಡು ವರ್ಷದಿಂದಲೂ ಮೈಸೂರು ರಾಜ್ಯದಲ್ಲಿ ಅಡಿಕೆ ಕಡಿಮೆಯಾಗಿದ್ದುದರಿಂದ ಅಡಿಕೆ ಬೆಳೆಗಾರರು ಬಹಳ ಕಷ್ಟಕ್ಕೆ ಒಳಗಾಗಿದ್ದರು. ಅಡಿಕೆಯ ಮಾರ್ಕೆಟ್ ಪೂರ್ತಾ ಕೆಲವು ಕಮೀಷನ್ ಏಜಂಟರ ಹಾಗೂ ದಳ್ಳಾಳಿಗಳ ಕೈಯ್ಯಲ್ಲಿ ಇದ್ದುದರಿಂದ ಅವರು ಇಲ್ಲಿ ಆದಷ್ಟು ಕಮ್ಮಿಗೆ ಉತ್ತರ ಹಿಂದೂಸ್ಥಾನಕ್ಕೆ ಅಡಿಕೆಯನ್ನು ತೆಗೆದುಕೊಂಡು ಹೋಗಿ ಜಾಸ್ತಿ ರೇಟಿನಲ್ಲಿ ಮಾರಿ ಲಾಭ ಪಡೆಯುತ್ತಿದ್ದರು. ಅದರಿಂದ ನಮ್ಮ ರಾಜ್ಯಕ್ಕೆ ಏನೂ ಪ್ರಯೋಜನವಾಗುತ್ತಿರಲಿಲ್ಲ. ಅದಕ್ಕಾಗಿ ಇಲ್ಲಿ ಅಡಿಕೆ ಖರೀದಿಯನ್ನು ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಅಡಿಕೆ ಮಾರಾಟವನ್ನು ಮಾಡುವ ಒಂದು ಕೇಂದ್ರ ಸಂಸ್ಥೆ ಬೇಕು ಎನ್ನುವ ದೃಷ್ಟಿಯಿಂದ ಈ ಒಂದು ಹೊಸ ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಈ ಹೊಸ ಸಂಸ್ಥೆಯ ಹೆಸರು ಸೆಂಟ್ರಲ್ ಅರೇಕಾ ಮಾರ್ಕೆಟಿಂಗ್ ಆ್ಯಂಡ್ ಪ್ರೊಸೆಸಿಂಗ್ ಕೋ ಆಪರೇಟಿವ್ ಎಂದು ಇದೆ. ಈ ಒಂದು ಸಂಸ್ಥೆ ಮೈಸೂರು ರಾಜ್ಯದಲ್ಲಿ ರಿಜಿಸ್ಟ್ರಾರ್ ಆದರೂ ಕೂಡ ಎಲ್ಲಿ ಎಲ್ಲಿ ಅಡಿಕೆ ಬೆಳೆಯುತ್ತಾರೋ ಅಲ್ಲಿಗೆಲ್ಲ ಹೋಗಿ ತೆಗೆದುಕೊಂಡು ಬಂದು ಗ್ರಾಮೀಣ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಇದನ್ನು ಸೆಂಟ್ರಲ್ ಅರೇಕಾ ಮಾರ್ಕೆಟಿಂಗ್ ಆ್ಯಂಡ್ ಪ್ರೊಸೆಸಿಂಗ್ ಕೋ ಆಪರೇಟಿವ್ ಎಂದು ಮಾಡಿದರು. ಈ ಅಡಿಕೆ ಉತ್ಪಾದನೆ ಹೆಚ್ಚು ಕಡಿಮೆ ಸಮನಾಗಿ ನಮ್ಮ ಮೈಸೂರು ಮತ್ತು ಕೇರಳ ರಾಜ್ಯಗಳಲ್ಲಿ ಆಗುತ್ತದೆ. ಆದುದರಿಂದ ಈ ಸಂಸ್ಥೆಯನ್ನು ಸ್ಥಾಪನೆ ಮಾಡುವಾಗ ಕೇರಳ ಮತ್ತು ಮೈಸೂರು ಈ ಎರಡೂ ರಾಜ್ಯಗಳ ಅಡಿಕೆ ಬೆಳೆಗಾರರ ಪ್ರತಿನಿಧಿಗಳು ಸೇರಿ ಬಹಳ ಕೂಲಂಕಷವಾಗಿ ವಿಚಾರ ಮಾಡಿ ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಇದಕ್ಕೆ ಮೈಸೂರು ಸರ್ಕಾರ 37½ ಲಕ್ಷ ರೂಪಾಯಿ ಮತ್ತು ಕೇರಳ ಸರ್ಕಾರ 37½ ಲಕ್ಷ ರೂಪಾಯಿ ಒಟ್ಟು ೭೫ ಲಕ್ಷ ರೂಪಾಯಿಯನ್ನು ಬಂಡವಾಳ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಅಡಿಕೆ ಬೆಳೆಗಾರರಿಂದ ಉಳಿದ ೨೫ ಲಕ್ಷ ರೂಪಾಯಿಗಳನ್ನು ಬಂಡವಾಳವಾಗಿ ಸಂಗ್ರಹ ಮಾಡಿದರು. ಅದಕ್ಕೆ ಒಟ್ಟು ಒಂದು ಕೋಟಿ ರೂಪಾಯಿ ಬಂಡವಾಳ ಇದೆ. ಒಂದು ಕೋಟಿ ರೂಪಾಯಿ ಬಂಡವಾಳದ ಈ ಸಂಸ್ಥೆಗೆ ಮೈಸೂರು ಮತ್ತು ಕೇರಳ ಈ ಎರಡು ರಾಜ್ಯಗಳಿಂದಲೂ ಇದರ ಆಡಳಿತ ಮಂಡಲಿಯಲ್ಲಿ ಸಮನಾಗಿ ಪ್ರಾತಿನಿಧ್ಯ ಇದೆ. ಆದುದರಿಂದ ಯಾವ ಜಿಲ್ಲೆಗೂ ಪ್ರತ್ಯೇಕವಾಗಿ ಪ್ರಾತಿನಿಧ್ಯ ಕೊಟ್ಟಿರುವುದು ನನಗೆ ಕಾಣಬರಲಿಲ್ಲ. ಈಗ ಈ ಸಂಸ್ಥೆ ಅನೇಕ ಕಷ್ಟಗಳನ್ನು ಎದುರಿಸುತ್ತಿದೆ. ಮುಖ್ಯವಾದುದ್ದು ಹಣದ ಸಮಸ್ಯೆ ಮತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು. ಶಿವಮೊಗ್ಗಾದಲ್ಲಿ ಇರತಕ್ಕಂಥ ಫೆಡರೇಷನ್‌ನಿಂದ ನಷ್ಟಕ್ಕೆ ಅಡಿಕೆ ಖರೀದಿ ಮಾಡಿದ್ದಾರೆ. ಅದರಲ್ಲೂ ಅನೇಕ ದುರ್ವ್ಯವಹಾರ ನಡೆದಿದೆ ಎಂದು. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಆ ಶಿವಮೊಗ್ಗ ಫೆಡರೇಷನ್ ನವರು ಹೆಚ್ಚಿನ ಒಂದು ಬೆಲೆ ಕೊಟ್ಟು ನಷ್ಟ ಮಾಡಿಕೊಂಡು ಹಿಂದೆ ಏನು ದಾಸ್ತಾನು ಮಾಡಿ ಇಟ್ಟಿದ್ದರು ಅದನ್ನು ಕೇಂದ್ರ ಅಡಿಕೆ ಮಾರಾಟ ಮತ್ತು ಸಹಕಾರ ಸಂಸ್ಥೆಗೆ ತಳ್ಳಿ ಹಾಕುವುದಕ್ಕೆ ಪ್ರಯತ್ನ ನಡೆದಿತ್ತು ನಿಜ. ಅದಕ್ಕೆ ಕೇಂದ್ರ ಸಂಸ್ಥೆ ಒಪ್ಪದೇ ಆ ಅಡಿಕೆಯನ್ನು ಪರ್ಚೇಸ್ ಮಾಡಲಿಲ್ಲ. ಅದನ್ನು ತೆಗೆದುಕೊಂಡರೆ ನಷ್ಟವಾಗುತ್ತದೆ ಎಂದು ತಿಳಿದುಕೊಂಡು ಅವರು ತೆಗೆದುಕೊಳ್ಳಲಿಲ್ಲ. ಈಗ ಕೇಂದ್ರ ಅಡಿಕೆ ಮಾರಾಟ ಮತ್ತು ಸಹಕಾರ ಸಂಸ್ಥೆಯವರು ಏನು ಮಾಡುತ್ತಿದ್ದಾರೆ ಎಂದರೆ ಅವರೇ ನೇರವಾಗಿ ಅಡಿಕೆ ಬೆಳೆಗಾರರ ಹತ್ತಿರ ಹೋಗಿ ಖರೀದಿ ಮಾಡುತ್ತಾರೆ. ಅಷ್ಟೇ ಅಲ್ಲ ಕೇರಳ ಮತ್ತು ಮೈಸೂರು ರಾಜ್ಯಗಳ ಅನೇಕ ಶಾಖೆಗಳನ್ನು ತೆರೆದು ನೇರವಾಗಿ ಬೆಳೆಗಾರರಿಂದಲೇ ಪರ್ಚೇಜ್ ಮಾಡುತ್ತಾರೆ. ಶಿವಮೊಗ್ಗಾ ಮತ್ತು ಸಾಗರದಲ್ಲಿ ಇವರ ಸಂಸ್ಥೆಗಳು ಇವೆ ಅದಕ್ಕೆ ಕಮೀಷನ್ ಏಜೆನ್ಸಿ ವ್ಯವಹಾರ ನಡೆಸುತ್ತವೆ. ಈ ಸಂಸ್ಥೆಯು ಯಾವ ಕಮೀಷನ್ ಏಜನ್ಸಿ ಅಲ್ಲ. ಈ ಕೇಂದ್ರ ಸಹಕಾರ ಅಡಿಕೆ ಮಾರಾಟ ಮತ್ತು ಸಹಕಾರ ಸಂಸ್ಥೆಯವರು ನೇರವಾಗಿ ಅಡಿಕೆ ಬೆಳೆಗಾರರ ಹತ್ತಿರ ಕೊಂಡಕೊಳ್ಳುವುದೇ ಅಲ್ಲದೇ ಮಾರಾಟ ಮಾಡುವುದಕ್ಕೂ ಕೂಡ ವ್ಯವಸ್ಥೆ ಮಾಡಿದ್ದಾರೆ. ಅದರಿಂದ ಅಡಿಕೆ ಬೆಳೆಗಾರರಿಗೆ ಪ್ರಯೋಜನವಾಗಿದೆ. ಅದರಿಂದ ಈ ವರ್ಷ ೧೦೦ ಕ್ಕೆ ೭೫ ರಷ್ಟು ಬೆಲೆ ಜಾಸ್ತಿಯಾಗಿ ಬೆಳೆಗಾರರು ಉಳಿದುಕೊಂಡಿದ್ದಾರೆ ಎಂದು ನನ್ನ ಭಾವನೆ.

ಇನ್ನು ಇದರಲ್ಲಿ ಇನ್ನೊಂದು ಅಂಶ ಏನೆಂದರೆ ಮೈಸೂರು ರಾಜ್ಯದಲ್ಲಿ ಈ ಒಂದೆಯೇ ಮೈಸೂರು ಸ್ಟೇಟ್ ಅರೇಕಾ ನಟ್ ಮಾರ್ಕೆಟಿಂಗ್ ಕೋ ಆಪರೇಟಿವ್ ಫೆಡರೇಷನ್ ಇರುವಾಗ ಈ ಒಂದು ಸಂಸ್ಥೆಯನ್ನು ಹೊಸದಾಗಿ ಏತಕ್ಕೆ ಮಾಡಬೇಕಾಗಿತ್ತು ಎನ್ನುವ ಪ್ರಶ್ನೆ. ಆ ಸಂಸ್ಥೆ ಕಮೀಷನ್ ಏಜನ್ಸಿಯಾಗಿ ಸ್ಥಾಪನೆಯಾಯಿತು. ಆದರೆ ಈಗ ಆಗಿರತಕ್ಕಂಥ ಸಂಸ್ಥೆ ಅಡಿಕೆಯನ್ನು ಮಾರಾಟ ಮಾಡುವುದರ ಜೊತೆಗೆ ಈ ಅಡಿಕೆಯ ಸಂಶೋಧನೆಯನ್ನೂ ನಡೆಸುತ್ತದೆ. ಅಡಿಕೆಯ ಸಿಪ್ಪೆಯನ್ನು ಉಪಯೋಗಿಸಿ ಕಾಗದ ಮಾಡಬಹುದು. ಹಾಳೆಯಿಂದ ಅಗ್ಗದ ದರದಲ್ಲಿ ಒಳ್ಳೆ ಸುಂದರವಾದ ಚಪ್ಪಲಿ ಮಾಡಬಹುದು. ಇನ್ನೂ ಅನೇಕ

ಕೈಗಾರಿಕೆಗಳನ್ನು ಮಾಡಬಹುದು. ಉತ್ತರ ಪ್ರದೇಶದಲ್ಲಿ ಮಳೆ ಕಡಿಮೆ ಇರುವುದರಿಂದ ಅಲ್ಲಿ ಹೆಣ್ಣು ಮಕ್ಕಳು ನಾಜೂಕಾದ ಚಪ್ಪಲಿಗಳನ್ನು ಹಾಕಿಕೊಳ್ಳುವುದರಿಂದ ಅದನ್ನು ಇದರಿಂದ ತಯಾರು ಮಾಡಬಹುದು. ಚಪ್ಪಲಿಯನ್ನು ಕಾರ್ಡಬೋರ್ಡನಿಂದ ಏನು ಮಾಡುತ್ತಾರೋ ಅದಕ್ಕಿಂತಲೂ ಇದು ಉತ್ತಮವಾದುದು. ಆದುದರಿಂದ ಇದನ್ನು ಉಪಯೋಗಿಸಿಕೊಂಡು ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡಿದ್ದಾರೆ. ಅಡಿಕೆಯಿಂದ ಆಲ್ಕೊಹಾಲ್ ಕೊಬ್ಬು ಪ್ರತ್ಯೇಕಿಸಬಹುದು. ಈ ರೀತಿಯಾಗಿ ಇದರಲ್ಲಿ ಅನೇಕ ಸಂಶೋಧನೆ ನಡೆಸಬಹುದು. ಈ ಅಡಿಕೆಯನ್ನು ಬೇರೆ ಬೇರೆ ರೀತಿಯಲ್ಲಿ ಪರಿಷ್ಕರಿಸಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಅವಲಂಬಿಸಿಕೊಂಡಿರತಕ್ಕಂಥ ಜನರಿಗೆ ಇದರಿಂದ ಪ್ರಯೋಜನ ಮಾಡಿಕೊಡಬಹುದು. ಇದಕ್ಕೆ ಬೇಕಾದ ವ್ಯವಸ್ಥೆಯನ್ನೇ ಈ ಸಂಸ್ಥೆ ಮಾಡುವ ಉದ್ದೇಶವಿದೆ. ಈ ಸಂಸ್ಥೆ ಈಗ ೭೫ ಲಕ್ಷ ರೂಪಾಯಿ ಬಂಡವಾಳದಲ್ಲಿ ನಡೆಯುತ್ತಾ ಇದೆ. ಸಂಶೋಧನಾ ಕಾರ್ಯಕ್ಕೆ ಬೇಕಾದ ಅಂಶಗಳನ್ನು ಉಪಯೋಗಿಸಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಇನ್ನೂ ಹಣದ ಅವಶ್ಯಕತೆ ಇದೆ. ಈಗ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರದೊಂದಿಗೆ ಈ ಬಗ್ಗೆ ಒಂದು ಯೋಜನೆ ಮಾಡಿಕೊಟ್ಟು ಪ್ರೋಸೆಸಿಂಗ್ ಮತ್ತು ರೀಸರ್ಚಿಗೆ ಅನುಕೂಲವಾಗುವ ಹಾಗೆ ಇದಕ್ಕೆ ತಾವು ಹಣವನ್ನು ಒದಗಿಸಬೇಕು ಎಂದು ಕೇಳಿದರೆ ಅವರು ಹಣವನ್ನು ಒದಗಿಸುವುದಕ್ಕೆ ಸಾಧ್ಯ ಇದೆ. ಈ ಬಗ್ಗೆ ಮಾನ್ಯ ಅರ್ಥಸಚಿವರು ಈ ಸಂಸ್ಥೆಗೆ ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಕೋ ಆಪರೇಟಿವ್ ಡಿಪಾರ್ಟಮೆಂಟ್ ಬಗ್ಗೆ ಕೆಲವು ವಿಷಯಗಳನ್ನು ಮಾನ್ಯ ಅರ್ಥಸಚಿವರ ಗಮನಕ್ಕೆ ತರುತ್ತೇನೆ. ನಮ್ಮ ಕಡೆಯ ಆಸ್ಪತ್ರೆಗಳಿಗೆ ಕೋ ಆಪರೇಟೀವ್ ಸೊಸೈಟಿಯಿಂದ ಆಹಾರ ಸರಬರಾಜು ಮಾಡುತ್ತಿದ್ದಾರೆ. ಹಾಗೆಯೇ ಇನ್ನೂ ಅನೇಕ ಸಂಸ್ಥೆಗಳಿಗೆ ಮತ್ತು ಮುನಿಸಿಪಾಲಿಟಿಗಳಿಗೆ ಆಹಾರ ಮತ್ತು ಇತರ ಬೇಬಿ ಫುಡ್‌ನ್ನು ಸರಬರಾಜು ಮಾಡುತ್ತಿದ್ದಾರೆ. ಆದರೆ ದುರ್ದೈವವಶಾತ ನಮ್ಮ ಅರ್ಥಸಚಿವರು ಅವರ ಬೀಗದ ಕೈ ಹಾಕಿ ಸ್ಕ್ರೂ ತಿರುಗಿಸಿ ಬಿಟ್ಟಿದ್ದಾರೆ. ಅಂದರೆ ಈಗ ಆಹಾರ ಸರಬರಾಜನ್ನು ಕೋ ಆಪರೇಟಿವ್ ಸೊಸೈಟಿಯವರು ಮಾಡುವುದಕ್ಕೆ ಅವರಿಗೆ ಸಕಾಲದಲ್ಲಿ ಬಿಲ್ಲೇ ಪಾವತೀ ಮಾಡುತ್ತಿಲ್ಲ. ಅವರಿಗೆ ಸಹಾಯ ಮಾಡುವುದಕ್ಕೂ ಕೂಡ ಸಚಿವರಿಗೆ ಮನಸ್ಸು ಬರುತ್ತಾ ಇಲ್ಲ. ಇದರಿಂದ ಆಸ್ಪತ್ರೆಗಳಿಗೆ ಅವರು ಆಹಾರ ಸರಬರಾಜು ಮಾಡುವುದೇ ಕಷ್ಟವಾಗಿದೆ. ದಯವಿಟ್ಟು ತಾವು ಆ ಬಗ್ಗೆ ಮನಸ್ಸು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಿಮಗೆ ಈ ಬಗ್ಗೆ ಹೇಳಬೇಕಾದರೆ ಬಂಟವಾಳದಲ್ಲಿರುವ ಗೌರ್ನಮೆಂಟ ಎಂಪ್ಲಾಯಿಸ್ ಕೋಆಪರೇಟಿವ್ ಸೊಸೈಟಿಯವರು ಆಸ್ಪತ್ರೆಗಳಿಗೆ ಆಹಾರ ಧಾನ್ಯವನ್ನು ಒದಗಿಸಿದ್ದರೂ ಕೂಡ ಅವರಿಗೆ ಬಿಲ್ಲೇ ಪಾವತಿಯಾಗುವುದಿಲ್ಲ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ತಾವು ಅದನ್ನು ದಯವಿಟ್ಟು ನೋಡಬೇಕು. ಯಾವುದಕ್ಕೆ ಹಣ ಸೋರಿ ಹೋಗಿದೆ ಅದನ್ನು ತಡೆಯಿರಿ, ಅದಕ್ಕೆ ನಮ್ಮ ಬೆಂಬಲ ಇದೆ. ಆದರೆ ಕೊಡಬೇಕಾದಂಥ ಹಣವನ್ನು ಕೊಡುವುದಕ್ಕೆ ಹಣ ಇಲ್ಲ ಕಷ್ಟ ಇದೆ ಎಂದರೆ ಅದು ಸರಿಯಲ್ಲ. ತಾವು ದಯವಿಟ್ಟು ಆ ಬಗ್ಗೆ ಸಹಾಯ ಮಾಡಬೇಕು ಎಂದು ಕೇಳುತ್ತೇನೆ.

ಇನ್ನು ಬಂಟವಾಳ ಆಸ್ಪತ್ರೆಯಲ್ಲಿರುವ ನೌಕರರು ಕೆಲಸಕ್ಕೆ ಸೇರಿ ೭–೮ ವರ್ಷವಾಯಿತು. ಅವರನ್ನು ಇನ್ನೂ ಅಬ್ಸಾರ್ಬ ಮಾಡಿಲ್ಲ. ಇದರಿಂದ ಅವರಿಗೆ ಸರಿಯಾಗಿ ಪಗಾರ ಸಿಗುತ್ತಾ ಇಲ್ಲ. ಏತಕ್ಕೆಂದರೆ ಅವರು ೬–೬ ತಿಂಗಳಿಗೆ ಇಲ್ಲಿಗೆ ಬರಬೇಕು, ಅಧಿಕಾರಿಗಳನ್ನು ಕಂಡು ಆ ಬಿಲ್ಲನ್ನು ಸ್ಯಾನಕ್ಷನ್ ಮಾಡ್ಸಿಕೊಳ್ಳಬೇಕು. ಎ. ಜಿ. ಆಫೀಸಿನಲ್ಲಿ ಏನಾದರೂ ತಡೆದಿದ್ದರೆ ಅಲ್ಲಿಗೆ ಹೋಗಿ ನೋಡಬೇಕು. ಇದರಿಂದ ಅವರಿಗೆ ಸಕಾಲದಲ್ಲಿ ಪಗಾರ ಸಿಗುತ್ತಾ ಇಲ್ಲ ಎಂದು ಹೇಳಬಯಸುತ್ತೇನೆ. ಇಂಥ ಅವ್ಯವಸ್ಥೆ ಇದೆ. ಇದನ್ನು ಸರ್ಕಾರದವರು ಕೂಡಲೆ ಸರಿಪಡಿಸಬೇಕು. ಅವರಿಗೆ ಅನೇಕರಿಗೆ ಸಂಬಳಗಳು ಸಿಕ್ಕಿಲ್ಲ, ಇನ್ನು ಕೆಲವರಿಗೆ ಪೆನ್‌ಷನ್ ಕೂಡ ಸಿಕ್ಕಿಲ್ಲ. ಮೊನ್ನೆ ಸಂಡೂರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಏನೋ ಹೇಳಿದ್ದರಲ್ಲಾ...

ಶ್ರೀ ಎಂ. ವೈ. ಘೋರ್ಪಡೆ :—ಅದು ಹಣದ ತೊಂದರೆಯಿಂದಲ್ಲ. ಅದಕ್ಕೆ ಇನ್ನೂ ಬೇರೆ ಏನೋ ಕಾರಣಗಳಿರಬೇಕು.

ಶ್ರೀ ಬಿ. ವಿ. ಕಕ್ಕಿಲಾಯ :—ಅದನ್ನು ಮಾನ್ಯ ಸಚಿವರು ಈ ಸಭೆಗೆ ಹೇಳಿದರೇನೂ ಪ್ರಯೋಜನ ಇಲ್ಲ. ಅದನ್ನು ಅವರು ತಮ್ಮ ಮಂತ್ರಿಮಂಡಲದಲ್ಲಿ ಸರಿಪಡಿಸಿಕೊಳ್ಳಬೇಕು.

ಇನ್ನು ನಮ್ಮಲ್ಲಿ ಒಂದು ಜನತಾ ಬಜಾರ್ ಇದೆ. ಹಿಂದೆ ನಮ್ಮ ಜಿಲ್ಲೆಯವರೇ ಒಬ್ಬರು ಸಚಿವರಾಗಿದ್ದಾಗ ಅಲ್ಲಿ ನಡೆದಿದ್ದ ಅಕೃತ್ಯಗಳ ಬಗ್ಗೆ ಒಬ್ಬ ಅಧಿಕಾರಿಯನ್ನು ತನಿಖೆ ನಡೆಸಲು ನೇಮಕ ಮಾಡಿದ್ದರು. ಅವರು ಅದರಂತೆ ಅಲ್ಲಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಆದರೆ ಆ ವರದಿ ಸರ್ಕಾರದವರ ಬುಟ್ಟಿಯಲ್ಲಿ ಎಲ್ಲೋ ಕೊಳೆಯುತ್ತಿದೆ. ಅದನ್ನು ಏಕೆ ಹಾಗೆ ಮುಚ್ಚಿಟ್ಟಿದ್ದಾರೆ ?

ಅದರಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಮಾಡಿ ಅಲ್ಲಿ ಜನರಿಗೆ ಸರಿಯಾದ ರೀತಿಯಲ್ಲಿ ಸಾಮಾನುಗಳನ್ನು ವಿತರಣೆ ಮಾಡುವಂತೆ ಮಾಡಬೇಕೆಂದು ತಿಳಿಸುತ್ತೇನೆ. ಸರಕಾರದವರು ಇತ್ತಕಡೆಗೆ ತಮ್ಮ ಗಮನವನ್ನು ಕೂಡಲೆ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿರತಕ್ಕ ಪೋಲೀಸ ಸಿಬ್ಬಂದಿಯ ಬಗ್ಗೆ ಅವರ ದಕ್ಷತೆಯ ಬಗ್ಗೆ ಎರಡು ಮಾತುಗಳನ್ನಾಡ ಬೇಕಾಗಿದೆ. ಅಲ್ಲಿ ಪ್ರತಿತಿಂಗಳಲ್ಲೂ ಮೇಜರ್ ಆಕ್ಸಿಡೆಂಟುಗಳು ಹೆಚ್ಚು ಹೆಚ್ಚು ಆಗಲಿಕ್ಕೆ ಹತ್ತಿವೆ. ಒಂದೊಂದು ಕಾರಿನಲ್ಲೂ ೨೫ ಕ್ಕೆ ಕಡಿಮೆ ಇಲ್ಲದಂತೆ ಜನರು ಪ್ರಯಾಣ ಮಾಡುತ್ತಿದ್ದಾರೆ. ಡ್ರೈವರ್ ತನ್ನ ಜಾಗದಲ್ಲಿ ಮತ್ತೊಬ್ಬನನ್ನು ಕೂಡಿಸಿಕೊಂಡು ಅವನ ತೊಡೆಯ ಮೇಲೆ ಕುಳಿತು ಡ್ರೈವ್ ಮಾಡಿ ದಾಗ ಅವನನ್ನು ಕೇಳತಕ್ಕವರೆ ಇಲ್ಲ ಅಲ್ಲಿ. ಒಂದೊಂದು ಆಟೋ ರಿಕ್ಷಾದಲ್ಲೂ ೬–೭ ಜನರು ಪ್ರಯಾಣ ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ಹೆಣ್ಣುಮಕ್ಕಳಿಗೆ ತುಂಬಾ ತೊಂದರೆಯಾಗಿದೆ. ಜನರು ಕಣ್ಣೀರಿಡುತ್ತಿದ್ದಾರೆ. ಆದರೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಮಂತ್ರಿಗಳ ಮತ್ತು ಶಾಸಕರ ಕಾರುಗಳನ್ನು ಪೋಲೀಸರು ಚೆಕ್ ಮಾಡುತ್ತಿಲ್ಲ. ಆದರೆ ನಮ್ಮಲ್ಲಿ ಯಾವ ವೆಹಿಕಲ್ಲನ್ನೂ ಅವರು ಚೆಕ್ ಮಾಡುವುದಿಲ್ಲ. ಅಲ್ಲಿ ಟ್ರಾಫಿಕ್ ರೂಲ್ಸಗಳೇ ಇಲ್ಲ. ಇಂಥ ಅವ್ಯವಹಾರಗಳು ಅಲ್ಲಿ ನಡೆಯುತ್ತಿರುವುದರಿಂದಲೇ ನಮ್ಮ ಸಾರಿಗೆ ಸಂಸ್ಥೆಗೂ ಬಹಳ ನಷ್ಟವಾಗುವುದಕ್ಕೆ ಕಾರಣವಾಗಿದೆ. ಅತ್ತ ಸರಕಾರಕ್ಕೆ ಒಂದು ನಷ್ಟವಾದರೆ ಇನ್ನೊಂದು ಕಡೆ ಸಾರ್ವಜನಿಕರ ಪ್ರಾಣಕ್ಕೂ ಬಹಳ ಅಪಾಯ ಉಂಟಾಗತಕ್ಕ ಅವಕಾಶಗಳು ಬಹಳವಾಗಿವೆ. ಇನ್ನು ಈ ಪೋಲೀಸರ ಬಗ್ಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಪೋಲೀಸಿನವರಿಗೆ ಏನಾದರೂ ಸಮಾಚಾರ ಗಳನ್ನು ರಿಜಿಷ್ಟರ್ಡ್ ಕವರಿನ ಮೂಲಕ ಕಳುಹಿಸಿದರೆ ಅವರು ಅದನ್ನು ರೆಫ್ಯೂಜ್ಡ್ ಎಂದು ಹೇಳಿ ಬರೆದು ವಾಪಸ್ ಕಳುಹಿಸಿದ್ದಾರೆ. ಆ ಕವರನ್ನು ನಾನು ಈದಿನ ಇಲ್ಲಿಗೆ ತರಲಿಲ್ಲ. ನಾಳೆ ದಿವಸ ಅದನ್ನು ತಂದು ಮಾನ್ಯ ಸಚಿವರ ಕಡೆಗೆ ಕೊಡುತ್ತೇನೆ. ಆ ರಿಜಿಷ್ಟರ್ಡ್ ಕವರಲ್ಲಿ ಒಬ್ಬ ವ್ಯಕ್ತಿ ತನಗೆ ಬೇರೆಯವ ರಿಂದ ಆಗುತ್ತಿರುವ ಕಿರುಕುಳವನ್ನು ಬರೆದು ಆ ಬಗ್ಗೆ ತನಗೆ ರಕ್ಷಣೆ ಕೊಡಬೇಕೆಂದು ಬರೆದುಕೊಂಡಿದ್ದ ಒಂದು ಕವರ್ ಅದು. ಇಂಥ ಪೋಲೀಸ್ ಅಧಿಕಾರಿಗಳಿಗೆ ಸರ್ಕಾರದವರು ವಿಚಾರಣೆ ನಡೆಸಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ನನ್ನ ಕಡೆಯ ಕೆಲವು ಕಾರ್ಯ ಕರ್ತರನ್ನು ಮತ್ತು ಪಕ್ಷದವರನ್ನು ನಡು ಪೇಟೆಯಲ್ಲೇ ಕೆಲವರು ಹೊಡೆದರು. ಆದರೆ ಇಲ್ಲಿಯವರೆಗಾದರೂ ಆ ಜನರು ಯಾರು ಎಂಬುದನ್ನು ಪೋಲೀಸರಿಂದ ಪತ್ತೆ ಮಾಡುವುದಕ್ಕಾಗಿಲ್ಲ. ಇಲ್ಲಿಗೆ ೩ ತಿಂಗಳಾಯಿತು. ಅಲ್ಲಿನ ಪೋಲೀಸರಿಗೂ ಇನ್ನೂವರೆಗೂ ಆ ಕೇಸಿನಲ್ಲಿ ಒಂದು ಚಾರ್ಜಷೀಟನ್ನು ಹಾಕಲಿಕ್ಕೆ ಸಾಧ್ಯವಾಗಲಿಲ್ಲ. ಇಂಥ ಅದಕ್ಷ ಜನರಿಂದ ಅಲ್ಲಿ ಇನ್ನು ಕಾನೂನು ಪರಿಪಾಲನೆ ಎಷ್ಟರಮಟ್ಟಿಗೆ ನಡೆದೀತು ? ಆ ಉಡುಪಿಯಲ್ಲಿ ಕೆಲಸ ಕೇಳಲಿಕ್ಕೆ ಹೋದ ಕಾರ್ಮಿಕರನ್ನು ಹೊಡೆದು ಅಲ್ಲಿ ಮಲ್ಪೆಯಲ್ಲಿ ೧೪೪ ನೇ ಸೆಕ್ಷನ್ನನ್ನು ಹಾಕಿದ್ದಾರೆ. ರಾಜ್ಯದಲ್ಲಿ ಹೀಗೆಲ್ಲಾ ನಡೆಯುತ್ತಿದ್ದರೂ ಪೋಲೀಸನವರು ಕಳುಹಿಸಿಕೊಡತಕ್ಕ ಹೇಳಿಕೆಗಳನ್ನು ಸತ್ಯಾಂಶಗಳೆಂದು ಇಲ್ಲಿ ಮಂತ್ರಿಗಳು ಸಭೆಯಲ್ಲಿ ಓದಿಬಿಡುತ್ತಾರೆ. ರಾಜ್ಯದಲ್ಲಿ ಸಾರ್ವಜನಿಕ ರಿಗೆ ಪ್ರಾಣರಕ್ಷಣೆ ಮಾಡುವುದು ಕಾನೂನನ್ನು ಎಲ್ಲರೂ ಪರಿಪಾಲಿಸುವಂತೆ ಒತ್ತಾಯ ಮಾಡಬೇಕಾದ್ದು ಯಾರ ಕರ್ತವ್ಯ ? ದೇಶದಲ್ಲಿ ಶಿಸ್ತು ಪರಿಪಾಲನ ಮಾಡುವುದು ಯಾರ ಕರ್ತವ್ಯ ? ಗುಂಡಾಜನರು ಎಲ್ಲಿ ಬೇಕಾದರೂ ಏನು ಬೇಕಾದರೂ ಮಾಡಿದಾಗ್ಗೂ ಅವರನ್ನು ಕೇಳತಕ್ಕವರಿಲ್ಲ ಎಂದಮೇಲೆ ನಮಗೆ ಈ ಪೋಲೀಸ್ ಶಿಬ್ಬಂದಿಯಾದರೂ ಏಕಿರಬೇಕು ? ನಾನು ಮೊನ್ನೆ ಅಲ್ಲಿಗೆ ಐ.ಜಿ.ಪಿ. ಅವರು ಬಂದಾಗ್ಗೆ ಎಲ್ಲವನ್ನೂ ವಿವರವಾಗಿ ತಿಳಿಸಿದೆ. ಅವರು ವಿಚಾರ ಮಾಡುವುದಾಗಿ ಹೇಳಿ ಹೋದರು. ಆದರೇನೂ ಆಗಲಿಲ್ಲ. ಪರಿಸ್ಥಿತಿ ಇದ್ದಂತೆಯೇ ಇದೆ.

ಇನ್ನು ಎಕ್ಸೈಜ್ ಇಲಾಖೆಯ ಬಗ್ಗೆ ಎರಡು ಮಾತುಗಳು : ನಮ್ಮಲ್ಲಿ ಒಬ್ಬ ಎಕ್ಸೈಜ್ ಸಬ್ ಇನ್‌ಸ್ಪೆಕ್ಟರಿದ್ದರು. ಅವರ ಬಗ್ಗೆ ನಾನೂ ದೂರನ್ನು ಕೊಟ್ಟಿದ್ದೆ. ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಾಯಿಸಿದರು. ಆದಾಗ್ಯೂ ಆತ ಅಲ್ಲಿ ಬಹಿರಂಗವಾಗಿ ತಾನೆ ಹೆಂಢದಂಗಡಿ ಮತ್ತು ಸರಾಯಿ ಅಂಗಡಿಗಳನ್ನು ಹರಾಜಿನಲ್ಲಿ ಹಿಡಿದು ವ್ಯಾಪಾರ ಮಾಡುತ್ತಿದ್ದಾನೆ. ಆತನು ಗೂಂಡಾ ಜನರನ್ನು ಕಾರಲ್ಲಿ ಕೂಡಿಸಿಕೊಂಡು ಬಹಿರಂಗವಾಗಿ ತನ್ನ ಅಂಗಡಿಯಲ್ಲಿ ಹೆಂಡ ೪೦ ಪೈಸೆಗೆ ಲೀಟರ್ ಎಂದು ಕಾರಿನಲ್ಲಿ ಲೌಡ್‌ಸ್ಪೀಕರನ್ನು ಹಾಕಿಕೊಂಡು ಕೂಗುತ್ತ ಹೊಗುತ್ತಿರುತ್ತಾರೆ. ಇದನ್ನು ಕೇಳತಕ್ಕವರಿಲ್ಲ. ಇನ್ನು ಈ ಹೆಂಡದ ಮತ್ತು ಸರಾಯಿ ಅಂಗಡಿಗಳನ್ನು ಶಾಲೆಗಳ ಹತ್ತಿರ ದೇವಸ್ಥಾನಗಳ ಬಳಿ ಮತ್ತು ಮುಸ್ಲಿಮರ ಅಂದರೆ ಗೋಷಾ ಸ್ತ್ರೀಯರು ಇರತಕ್ಕ ಕಡೆಗಳಲ್ಲೆಲ್ಲಾ ತೆರೆದಿದ್ದಾರೆ. ಹರಿಜನರ ಕೇರಿಗಳಲ್ಲಿ ತೆರೆದಿದ್ದಾರೆ. ಇವು ಗಳಿಂದ ನಮಗೆ ಬರತಕ್ಕ ಲಾಭ ಸ್ವಲ್ಪ ಕಡಿಮೆಯಾದರೂ ಚಿಂತೆಯಿಲ್ಲ. ಈ ಹೆಂಡದ ಮತ್ತು ಸರಾಯಿ ಅಂಗಡಿಗಳನ್ನು ನಾನು ಹೇಳಿದ ಈ ಸ್ಥಳಗಳಿಂದ ಕೂಡಲೆ ಬೇರೆ ಕಡೆಗೆ ವರ್ಗಾಯಿಸಬೇಕೆಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅರ್ಥ ಸಚಿವರೇನು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಸಭೆಯ ಮುಂದಿಟ್ಟಿದ್ದಾರೆ ಅದನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳುತ್ತೇನೆ. ಡಿಮ್ಯಾಂಡ್ ನಂಬರು ೧೬ ಸೈಂಟಿಫಿಕ್ ಡಿಪಾರ್ಟಮೆಂಟಿನ ವಿಚಾರ ಪ್ರಸ್ತಾಪಿಸಿದ್ದಾರೆ. ಅದು ಗ್ರೌಂಡ್ ವಾಟರ್ ಸರ್ವೆ ಮತ್ತು ಇಂಡಸ್ಟ್ರೀಯಲ್ ಸರ್ವೆಗೆ ಸಂಬಂಧಪಟ್ಟಿದೆ. ನಮ್ಮ ರಾಜ್ಯವು ಅನೇಕ ಖನಿಜಗಳಿಗೆ ತೌರೂರಾಗಿದೆ. ಆ ಖನಿಜಗಳನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು. ರಾಷ್ಟ್ರದ ಮತ್ತು ದೇಶದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಇದು ಅವಶ್ಯಕ. ಇವತ್ತು ಕೋಲಾರದ ಚಿನ್ನದ ಗಣಿಯನ್ನು ವಹಿಸಿಕೊಂಡ ಮೇಲೆ ರಾಜ್ಯಕ್ಕೆ ಸಾಕಷ್ಟು ಲಾಭ ಬರುತ್ತಿದೆ. ಇಂದು ನಮ್ಮ ರಾಜ್ಯದಲ್ಲಿ ಅನೇಕ ಖನಿಜಗಳು ನಮಗೆ ದೊರೆಯುತ್ತಿವೆ. ಉದಾಹರಣೆಗೆ ಮ್ಯಾಂಗನೀಸ್, ಇದು ಅಪಾರ ವಾಗಿ ಅನೇಕ ಕಡೆ ಸಿಕ್ಕುತ್ತದೆ. ಇದನ್ನು ತೆಗೆದು ಬೇಕಾದಷ್ಟು ಲಾಭ ಬಂದಿದೆ. ನಮ್ಮ ಕ್ಷೇತ್ರದಲ್ಲಿರುವ ಒಂದು ಸಣ್ಣ ಗಣಿಯಿಂದ ಈಗಾಗಲೇ ಜಪಾನಿಗೆ ಸರಬರಾಜು ಮಾಡಿ ರಾಜ್ಯಕ್ಕೆ ೧೭ ಲಕ್ಷ ರೂಪಾಯಿಗಳ ಲಾಭ ದೊರೆತಿದೆಯೆಂದು ಗೊತ್ತಾಗಿದೆ. ಆದರೂ ಇಷ್ಟು ಲಾಭದಾಯಕವಾದ ಖನಿಜವನ್ನು ತೆಗೆಯುವುದನ್ನು ಖಾಸಗಿಯವರಿಗೆ ವಹಿಸಿರುವುದನ್ನು ನೋಡಿದರೆ ಇದು ಸಮಾಜವಾದಿ ಸರಕಾರ ಮಾಡುವ ಕೆಲಸವಲ್ಲ ಎಂದು ಹೇಳಬೇಕಾಗಿದೆ. ಕೋಣಂದೂರಿನ ಹತ್ತಿರ ಸ್ವಲ್ಪ ಭಾಗ ಮತ್ತು ಸೊಂಡೂರಿನ ಹತ್ತಿರ ಖಾಸಗಿ ಯವರಿಗೆ ಕೊಡಲಾಗಿದೆ. ಇದರಿಂದ ಖಾಸಗಿಯವರಿಗೆ ಹೆಚ್ಚು ಲಾಭವಾಗುವುದು. ಇದು ಸರಿಯಲ್ಲ. ಸಮಾಜವಾದದಲ್ಲಿ ನಂಬಿಕೆಯಿರುವ ಸರಕಾರ ಯಾವುದೇ ಆಗಲಿ ಹೀಗೆ ಮಾಡಬಾರದು. ಇದನ್ನು ತಕ್ಷಣ ರಾಷ್ಟ್ರೀಕರಣ ಮಾಡಿ ಇದರ ಸಂಪೂರ್ಣ ಉಪಯೋಗವನ್ನು ಸರಕಾರ ಪಡೆಯಬೇಕು. ಹಾಗೆಯೇ ನಮ್ಮ ಕ್ಷೇತ್ರದಲ್ಲಿ ಕೊಡಚಾದ್ರಿ ಬಳಿ ಮ್ಯಾಗ್ನಟೈಟ್ ಬಗ್ಗೆ ಸರ್ವೆ ಮಾಡುತ್ತಿದ್ದಾರೆ. ಇದು ಅಮೂಲ್ಯವಾದುದು. ಇದರ ಬಗ್ಗೆ ಸಂಶೋಧನೆ ನಡೆಸಬೇಕು, ಇದರಿಂದ ಬಂಗಾರಕ್ಕೆ ಬರುವಂಥ ವರಮಾನ ದೊರೆಯುವುದು.

ಈ ದೃಷ್ಟಿಯಿಂದ ರಾಜ್ಯದಲ್ಲಿರುವ ಮ್ಯಾಂಗನೀಸ್ ಮತ್ತಿತರ ಖನಿಜಗಳನ್ನು ತೆಗೆಯುವುದನ್ನು ಖಾಸಗಿಯವರಿಂದ ಸರಕಾರ ವಹಿಸಿಕೊಂಡು ತಕ್ಷಣ ಸರಕಾರ ತಾನೆ ಖನಿಜಗಳನ್ನು ತೆಗೆದು ಲಾಭ ಬರುವುದಕ್ಕೆ ಅವಕಾಶ ಮಾಡಿಕೊಳ್ಳಬೇಕು. ಹಿಂದೆ ಈ ವಿಚಾರ ಪ್ರಸ್ತಾಪ ಮಾಡಿದಾಗ ಕೈಗಾರಿಕಾ ಮಂತ್ರಿಗಳು ಹಣವಿಲ್ಲ, ಖಾಸಗಿಯವರು ಬಂದರೆ ಬೇಡವೆಂದು ಹೇಳುವುದಿಲ್ಲ ಎಂದು ತಿಳಿಸಿದರು. ಇದು ಮಹತ್ವದ ವಿಷಯ. ಖನಿಜ ಸಂಪತ್ತನ್ನು ರಾಷ್ಟ್ರದ ಸ್ವತ್ತಾಗಿ ಮಾಡಲು ಹಣವಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ಇದರಿಂದ ಸರಕಾರ ಚೆನ್ನಾಗಿ ಆಡಳಿತ ನಡೆಸುತ್ತಿಲ್ಲ ಎಂಬ ಅನುಮಾನ ಬರುವುದು. ಖಾಸಗಿಯವರು ಟಾಟಾ-ಬಿರ್ಲಾರವರು ಮುಂತಾದವರು ದಕ್ಷತೆಯಿಂದ ನಡೆಸಬಹುದು. ಈಗ ಕರ್ನಾಟಕ ಸರಕಾರ ಎರಡು ವರ್ಷಗಳ ಅವಧಿಗೆ ಕಂಟ್ರಾಕ್ಟ್ ಕೊಟ್ಟಿದೆ ಬಂಡವಾಳ ಅವರ ಹತ್ತಿರ ಇದೆ ಎಂದು. ಹೀಗೆ ಮಾಡುವುದು ಸಾಧುವಲ್ಲ. ಖನಿಜ ಸಂಪತ್ತನ್ನು ಸಂಪೂರ್ಣವಾಗಿ ಸರಕಾರ ವಹಿಸಿಕೊಳ್ಳಬೇಕು. ಅವರು ದೊಡ್ಡವರು, ಮ್ಯಾಂಗನೀಸ್ ಗಣಿ ಮಾಲೀಕರು, ಅವರಿಗೆ ಸಾಕಷ್ಟು ಅನುಕೂಲವಾಗಿದೆ, ಬೇಕಾದಷ್ಟು ಬಂಡವಾಳ ಅವರಲ್ಲಿದೆ, ಅವರಿಗೆ ಪರಿಹಾರದ ಹಣ ತಕ್ಷಣ ಕೊಡಬೇಕಾಗಿಲ್ಲ. ಅವರಿಗೆ ಹತ್ತು ವರ್ಷ ಕಂತುಗಳಲ್ಲಿ ಕೊಡಿ, ಬಾಂಡನ್ನು ಕೊಡಿ. ಹಾಗೆ ಮಾಡಿಯಾದರೂ ತಕ್ಷಣ ರಾಷ್ಟ್ರೀಕರಣ ಮಾಡಿಕೊಳ್ಳಬೇಕು. ಇದರಿಂದ ನಮಗೆ ಸಂಪತ್ತು ದೊರೆಯುವುದರ ಜೊತೆಗೆ ಅಲ್ಲಿನ ಕೆಲಸಗಾರರ ಸ್ಥಿತಿಗತಿಗಳನ್ನು ಸಹ ಸುಧಾರಿಸುವುದಕ್ಕೆ ಅವಕಾಶವಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಸೊಂಡೂರು ಮ್ಯಾಂಗನೀಸ್ ಗಣಿ ಏನಿದೆ ಅದನ್ನು ಸರಕಾರದವರು ತಕ್ಷಣ ವಹಿಸಿಕೊಳ್ಳುವುದು ಒಳ್ಳೆಯದು. ಅದನ್ನು ರಾಷ್ಟ್ರೀಕರಣ ಮಾಡಿ ಆದರ್ಶ ಸಚಿವರಾಗಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಇದು ವೈಯಕ್ತಿಕ ಆಸ್ತಿಯಲ್ಲ, ಪಬ್ಲಿಕ್ ಲಿಮಿಟೆಡ್ ಕಂಪನಿ ಈ ವಿಚಾರದಲ್ಲಿ ನಾನು ಮಾತನಾಡುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಚನಬಸಪ್ಪನವರದು ಮತ್ತು ತಮ್ಮದು ಕೋ ಆಪರೇಟಿವ್ ಸೊಸೈಟಿಯಿದೆ, ನಾಲ್ಕಾರು ಜನ ಸೇರಿ ಹೀಗೆ ಮಾಡುವುದು ಒಳ್ಳೆಯದು, ಕಾನೂನು ಪ್ರಕಾರ ಸರಿ. ಆದರೆ ಖಾಸಗಿ. ಕಾನೂನು ಪ್ರಕಾರ ಸರಕಾರ ವಹಿಸಿಕೊಳ್ಳಲು ಕಷ್ಟವಾಗುತ್ತದೆ. ನೈತಿಕ ದೃಷ್ಟಿಯಿಂದ ಇದನ್ನು ಯೋಚನೆ ಮಾಡಿ ಕೋಆಪರೇಟರ್ಸ್ ಯಾರಿದ್ದಾರೆ ಅವರೆಲ್ಲಾ ಸೇರಿ ಇದನ್ನು ಬಿಟ್ಟು ಕೊಟ್ಟರೆ ಒಳ್ಳೆಯದು. ಹೀಗೆ ಖಾಸಗಿ ಜನರ ಕೈಲಿ ಕೆಲವು ಗಣಿಗಳಿವೆ. ಇದನ್ನು ಅರಣ್ಯ ಸಚಿವರು ಕೂಡ ತಿಳಿಸಿದ್ದಾರೆ. ಮ್ಯಾಂಗನೀಸ್ ಓರ್‌ನಿಂದ ಫಾರಿನ್ ಎಕ್ಸ್‌ಛೇಂಜ್ ಬರುವುದು. ಪ್ರತಿಯೊಂದು ಖನಿಜ ದೊರೆಯುವ ಸ್ಥಳವನ್ನು ಸರಕಾರ ತೆಗೆದುಕೊಳ್ಳಬೇಕು. ಒಬ್ಬರು ಖಾಸಗಿಯವರು ನಮ್ಮ ಊರ ಬಳಿ ಮ್ಯಾಂಗನೀಸ್ ಓರ್ ತೆಗೆದುಕೊಂಡು ಕಾಡು ಕಡಿದು, ನಾಟ ತೆಗೆದುಕೊಂಡು ಅಪವ್ಯಯ ಮಾಡಿದ್ದಾರೆ. ಮ್ಯಾಂಗನೀಸ್ ಅದುರನ್ನು ತೆಗೆಯುವವರು ಈ ರೀತಿ ಮಾಡಿದ್ದಾರೆ. ಇದನ್ನು ಹೇಳಿದರೆ ಸರಕಾರವೇನು ಕ್ರಮ ತೆಗೆದುಕೊಳ್ಳುತ್ತಿಲ್ಲ. ಮುಖ್ಯವಾಗಿ ಎಲ್ಲ ಖಾಸಗಿ ಗಣಿಗಳನ್ನು ರಾಷ್ಟ್ರೀಕರಣ ಮಾಡಬೇಕು.

ಎಂಪ್ಲಾಯಮೆಂಟ ಬಗ್ಗೆ ಒಂದು ಮಾತು. ಇದರ ವಿಚಾರ ಹೇಳದಿರುವುದು ಒಂದು ದೃಷ್ಟಿಯಿಂದ ಒಳ್ಳೆಯದು. ಏಕೆಂದರೆ ಸರಕಾರ ಏನೇ ಹೇಳಲಿ ಕಣ್ಣೊರೆಸುವ ಕೆಲಸ ಮಾಡುವುದು. ನಿರುದ್ಯೋಗಿಗಳಾಗಿರುವವರು ಪ್ರತಿ ನಿತ್ಯವೂ ಕಾಗದ ಬರೆಯುವರು. ನಿರುದ್ಯೋಗಿ ವಿದ್ಯಾವಂತರು ಎಂಪ್ಲಾಯಮೆಂಟ್ ಎಕ್ಸ್‌ಛೇಂಜಿನ ಪ್ರಕಾರ ಸುಮಾರು ೫೦ ಲಕ್ಷ ಮಂದಿ ಇದ್ದಾರೆ. ಇದರಲ್ಲಿ ಬಹಳ ದುಡ್ಡನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಇವರು ಎಂಥವರಿಗೆ ಕೊಡುತ್ತಾರೆ ಎಂದರೆ, ಯಾರಿಗೆ ಆಸ್ತಿ, ಮನೆ ಇರುತ್ತದೆ ಅಂಥವರಿಗೆ ಅನುಕೂಲ ಮಾಡಿಕೊಡುತ್ತಾರೆ. ಇವತ್ತು ನಿಜವಾಗಿ ಆಕಾಶವೇ ಆಸ್ತಿಯಾಗಿರುವ ಲಕ್ಷೋಪಲಕ್ಷ ಜನ ವಿದ್ಯಾವಂತರು ಇದ್ದಾರೆ. ವಿದ್ಯಾವಂತ ನಿರುದ್ಯೋಗಿಗಳು ಪ್ರತಿ ಹಳ್ಳಿಯಲ್ಲಿ, ಪ್ರತಿ ಮನೆಯಲ್ಲಿ ಇದ್ದಾರೆ. ಅಂಥವರಿಗೆ ಏನು ಮಾಡಿದ್ದೀರಿ ? ಇಂತಹ ಡೋಂಗಿ ಮಾತುಗಳನ್ನು ಹೇಳಿ ಹೊಟ್ಟೆಯ ಮೇಲೆ ಹೊಡೆಯಬೇಡಿ. ಅನಾಥರಾಗಿ, ನಿರಾಶರಾಗಿ ಅಲೆಯುತ್ತಾ ಇರುವ ವಿದ್ಯಾವಂತ ತರುಣರನ್ನು ಮತ್ತು ತರುಣಿಯರನ್ನು ನಿರಾಶರನ್ನಾಗಿ ಮಾಡಿ, ಅವರಿಗೆ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿ, ವಂಚನೆಯನ್ನು ಮಾಡಿ, ದೊಡ್ಡ ಕಾರ್ಗತ್ತಲಲ್ಲಿ ನೂಕಿ, ಅವರನ್ನು ಪ್ರಕೋಪ ಪರಿಸ್ಥಿತಿಗೆ ಮುಟ್ಟಿಸುತ್ತೀರಿ. ನಮ್ಮ ರಾಜ್ಯದಲ್ಲಿರುವ ಅವಿದ್ಯಾವಂತರು, ವಿದ್ಯಾವಂತರು, ನಿರುದ್ಯೋಗಿಗಳು ನಿರಾಶರಾಗಿದ್ದಾರೆ, ಹತಾಶರಾಗಿದ್ದಾರೆ. ನಮಗೆ ಯಾರು ದಿಕ್ಕು ಎಂದು ಹೇಳುತ್ತಾರೆ. ಬಿ. ಎ., ಬಿ.ಎಸ್ಸಿ., ಮಾಡಿಕೊಂಡಿರುವವರು ಹೋಟೆಲ್‌ನಲ್ಲಿ ಸಪ್ಲೈಯರ್ಸ್ ಆಗಿ ಬರುವುದಕ್ಕೆ ತಯಾರಿದ್ದಾರೆ. ಸರಕಾರ ಶ್ರೀಮಂತರ ಮಕ್ಕಳಿಗೆ, ಆಸ್ತಿ ಮನೆ ಇರುವವರಿಗೆ ಕೊಡುತ್ತೀರಿ. ಬ್ಯಾಂಕಿನಲ್ಲಿ ಹಣ ಕೊಡಿಸುತ್ತೀರಿ. ಎಷ್ಟು ಜನ ನಿರ್ಗತಿಕ ಮಕ್ಕಳಿಗೆ ಬ್ಯಾಂಕಿನಲ್ಲಿ ಅನುಕೂಲ ಮಾಡಿ ಕೊಟ್ಟಿದ್ದೀರಿ ? ನೀವು ಅನುಕೂಲ ಇರುವವರಿಗೇ ಅನುಕೂಲ ಮಾಡಿಕೊಡುವುದು. ಮುಖ್ಯವಾಗಿ ನಿರುದ್ಯೋಗ ಸಮಸ್ಯೆ ಏನಿದೆ ಅದನ್ನು ಬಹಳ ರೀತಿಯಲ್ಲಿ ಕಾರ್ಯಾಗತವಾಗುವ ಹಾಗೆ ಒಂದು ಯೋಜನೆ ತಯಾರು ಮಾಡಬೇಕು. ನಾವು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟರೆ ತಾವು ತೆಗೆದುಕೊಳ್ಳುವುದಿಲ್ಲ. ಹಳ್ಳಿಗಳಲ್ಲಿ ನಿರಕ್ಷರತೆ ಇದೆ. ತಾವು ಅಧಿಕಾರಕ್ಕೆ ಬಂದ ಮೇಲೆ ಕಳೆದ ೨೫ ವರ್ಷಗಳಲ್ಲಿ ೧೦ ಕೋಟಿ ಅವಿದ್ಯಾವಂತರ ಸಂಖ್ಯೆ ಹೆಚ್ಚಾಗಿದೆ. ಹಳ್ಳಿಗಳಲ್ಲಿರತಕ್ಕ ಅವಿದ್ಯೆಯನ್ನು ತೊಲಗಿಸುವುದಕ್ಕೆ ಅಕ್ಷರತೆ ಮಾಡಿ. ಬಂಜರು ಭೂಮಿಯನ್ನು ಸ್ಟಾಟಿಸ್ಟಿಕ್ಸ್ ಪ್ರಕಾರ ರಾಜ್ಯದಲ್ಲಿ ತೆಗೆದುಕೊಂಡರೆ, ಸಾಗುವಳಿಗೆ ಯೋಗ್ಯವಲ್ಲದ ಬಂಜರು ಭೂಮಿ ೧೪ ಲಕ್ಷ ೮೨ ಸಾವಿರ ೯೨೭ ಹೆಕ್ಟೇರ ಇದೆ. ೨೫ ಲಕ್ಷ ೪೪ ಸಾವಿರದ ೫೭೧ ಹೆಕ್ಟೇರ ಸಾಗುವಳಿ ಭೂಮಿ ಇದೆ. ಸಾಗುವಳಿಗೆ ಲಭ್ಯವಲ್ಲದ ಭೂಮಿ ೧೭,೭೭,೦೮೮ ಹೆಕ್ಟೇರ ಭೂಮಿ ಇದೆ. ಆ ಭೂಮಿಯಲ್ಲಿ ಕೃಷಿಮಾಡುವುದಕ್ಕೆ ಅನ್ನಸೇನೆ ಮಾಡಿ, ಅಲ್ಲಿ ಉದ್ಯೋಗದಲ್ಲಿ ತೊಡಗಿಸಿರಿ ಎಂದರೆ ಮಾಡುವುದಿಲ್ಲ. ರಾಮಕೃಷ್ಣ ಹೆಗಡೆಯವರು ಭೂಸೇನೆ ಮಾಡಿದರು. ಅದು ಹೇಗಾಯಿತು ಎಂದರೆ, ಡಾಕ್ಟರ ಲೋಹಿಯಾರವರ ಹೆಸರು ಹೇಳಿದರು.

ಶ್ರೀ ಸಿ. ಬೈರೇಗೌಡ.—ಭೂಸೇನೆಯೂ ಬೇಡ, ಅನ್ನ ಸೇನೆಯೂ ಬೇಡ. ಇಪ್ಪತ್ತೆಂಟು ಸೇನೆ ಕಟ್ಟಿಸಿದರೆ ಏನು ಪ್ರಯೋಜನ ?

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ಅರ್ಥ ಮಂತ್ರಿಯಾಗಿದ್ದಂಥ ರಾಮಕೃಷ್ಣ ಹೆಗಡೆಯವರು ಭೂಸೇನೆ ಮಾಡಿದರು. ಎಲ್ಲಾ ಬಿಟ್ಟು ಡಾಕ್ಟರ ಲೋಹಿಯಾರವರ ಹೆಸರನ್ನು ಹೇಳಿದರು. ಅವರು ಹೇಳಿದ್ದು, ರಿಟೈರ್ಡ್ ಮಹಾ ದಂಡನಾಯಕ ಕುಮಾರ ಮಂಗಳಂ. ಇವರು ಅಲ್ಲಿ ಭೂಸೇನೆ ಮಾಡಿಕೊಂಡು ಕೂತಿದ್ದಾರೆ. ಹಳ್ಳಿ ಹಳ್ಳಿಯಲ್ಲಿ ಅನ್ನಸೇನೆಯಾಗಬೇಕು. ಅಲ್ಲಿರತಕ್ಕಂಥ ಅನಕ್ಷರಸ್ಥರನ್ನು, ನಿರುದ್ಯೋಗಿಗಳನ್ನು ಇದರಲ್ಲಿ ತೊಡಗಿಸಬೇಕು, ಅದರಿಂದ ಸಂಪತ್ತು ಹೆಚ್ಚುತ್ತದೆ, ಉದ್ಯೋಗವು ದೊರಕುತ್ತದೆ ಎಂದು. ಲೋಹಿಯಾರವರು ಏನು ಹೇಳಿದರು, ಅದನ್ನು ಅಪಭ್ರಂಶ ಮಾಡಿ, ಅವರ ಹೆಸರನ್ನು ಉಪಯೋಗಿಸಿಕೊಂಡು ಕೆಲವು ಜನರಿಗೆ ಕೆಲಸ ಕೊಡತಕ್ಕ ವ್ಯವಸ್ಥೆ ಮಾಡಿದರು. ಅಂಥ ಯೋಜನೆ ಬಿಡಿ. ಸರಿಯಾದ ಯೋಜನೆ ಮಾಡಿ. ರಾಷ್ಟ್ರದಲ್ಲಿ ನಿರುದ್ಯೋಗಿಗಳಿದ್ದಾರೆ, ಅವರು ರಾಜ್ಯದ ಕ್ರಾಂತಿಗೆ ನಾಂದಿಯನ್ನು ಹಾಕಿಯಾರು, ಎಚ್ಚರಿಕೆ ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಮೇಲೆ ಇಷ್ಟೊಂದು ಚರ್ಚೆಯಾಗುತ್ತದೆ ಎಂದು ನಾನು ತಿಳಿದುಕೊಂಡಿರಲಿಲ್ಲ. ಮಾನ್ಯ ಸದಸ್ಯರುಗಳು, ಈ ಒಂದು ಅವಕಾಶವನ್ನು ಉಪಯೋಗ ಮಾಡಿಕೊಂಡು ಎಲ್ಲಾ ವಿಷಯಗಳನ್ನೂ ಮಾತನಾಡಿಬಿಟ್ಟರು. ಅದರಲ್ಲಿರತಕ್ಕ ಕೆಲವು ಮುಖ್ಯ ಅಂಶಗಳಿಗೆ ಉತ್ತರ ಹೇಳುವ ಪ್ರಯತ್ನ ಮಾಡುತ್ತೇನೆ. ಇದಕ್ಕಿಂತ ಮುಂಚೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ನಾನು ಸ್ವಲ್ಪ ಹೇಳಬೇಕಾಗುತ್ತದೆ. ಏಕೆಂದರೆ, ಮಾನ್ಯ ಅಧ್ಯಕ್ಷರೇ ಹೇಳಿದ ಪ್ರಕಾರ ಇದು ಜನರಲ್ ಬಡ್ಜೆಟ್ ಡಿಸ್ಕಷನ್ ಅಲ್ಲ. ನೇರವಾಗಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ನಾವು ಚರ್ಚೆ ಮಾಡುತ್ತಾ ಇದ್ದೇವೆ. ಇದರಲ್ಲಿ ಅಂತಹ ಕಷ್ಟತರವಾದ ವಿಷಯವೇನೂ ಇಲ್ಲ. ಅಂಕಿಸಂಖ್ಯೆ ನೋಡಿದರೆ, ೭೭ ಕೋಟಿ ರೂಪಾಯಿ ಎಂದು ಕಂಡುಬಂದರೂ, ನೆಟ್ ಔಟ್ ಗೋ

೧ ಕೋಟಿ ೮೩ ಲಕ್ಷ ರೂಪಾಯಿ ಮಾತ್ರ ಇದೆ. ಅದೂ ಕೂಡ ಹೆಚ್ಚು ಸೇವಿಂಗ್ಸ್ ಮಾಡಿ ಕೊಡತ್ತಾ ಇಲ್ಲ. ಆ ದೃಷ್ಟಿಯಿಂದ ನೋಡಿದರೆ, ಇದರಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡುವಂಥ ವಿಷಯಗಳು ಅಡಕವಾಗಿಲ್ಲವೆಂದು ಹೇಳಬೇಕಾಗಿದೆ. ೭೭ ಕೋಟಿ ರೂಪಾಯಿ ಇಲ್ಲಿರತಕ್ಕಂಥ ನಿಯಮಗಳ ಪ್ರಕಾರ ಕೆಲವು ಬಾಬುಗಳನ್ನು ಸಭೆಯ ಗಮನಕ್ಕೆ ತರುವ ದೃಷ್ಟಿಯಿಂದ ಸೇರಿಸಬೇಕಾಗುತ್ತದೆ. ಉದಾಹರಣೆಗಾಗಿ ವೇಸ ಅಂಡ್ ಮೀನ್ಸ್ ಅಡ್ವಾನ್ಸಸ್. ಪ್ರತಿ ದಿನ ರಿಸರ್ವ್ ಬ್ಯಾಂಕ್‌ನಲ್ಲಿ ವೇಸ್ ಅಂಡ್ ಮೀನ್ಸ್ ತೆಗೆದುಕೊಳ್ಳುತ್ತೇವೆ, ಮತ್ತೆ ವಾಪಸ್ಸ ಕೊಡುತ್ತೇವೆ. ಅದೆಲ್ಲಾ ಪಟ್ಟಿ ಮಾಡಿ ಇದರಲ್ಲಿ ಸೇರಿಸುತ್ತೇವೆ. ವೇಸ್ ಅಂಡ್ ಮೀನ್ಸ್ ವ್ಯವಹಾರ ನಡೆಯುತ್ತದೆ. ರಿಸರ್ವ್ ಬ್ಯಾಂಕ ನಮಗೆ ಕೊಡುತ್ತದೆ, ಮಾರನೆಯ ದಿವಸ ನಾವು ವಾಪಸ್ ಕೊಡುತ್ತೇವೆ. ಇದೆಲ್ಲಾ ಪಟ್ಟಿ ಮಾಡಿದರೆ, ಆ ೭೭ ಕೋಟಿ ರೂ. ೬೩–೬೪ ಕೋಟಿ ರೂಪಾಯಿ ಆಗುತ್ತದೆ. ಅದೇ ರೀತಿ ಕೇಂದ್ರ ಸರಕಾರದವರು ೩ ಸಲ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಕೊಟ್ಟರು. ಅದು ೨೩ ಕೋಟಿ ರೂಪಾಯಿಗಳಷ್ಟು. ೨೩ ಕೋಟಿ ರೂಪಾಯಿಗಳಷ್ಟು ವೇಸ್ ಅಂಡ್ ಮೀನ್ಸ್ ಕೊಟ್ಟಿದ್ದನ್ನು ಈಗಾಗಲೇ ತೀರಿಸಿಬಿಟ್ಟಿದ್ದೇವೆ. ಈ ವ್ಯವಹಾರ ಏನಿದೆ. ವೇಸ್ ಅಂಡ್ ಮೀನ್ಸ್ ಪಡೆಯುವುದು, ತೀರಿಸುವುದು, ಇದು ಸಪ್ಲಿಮೆಂಟರಿ ಗ್ರಾಂಟ್ಸ್‌ನಲ್ಲಿ ಬರಬೇಕಾಗುತ್ತದೆ. ಅದನ್ನು ಕೂಡ ಇದರಲ್ಲಿ ಸೇರಿಸಲಾಗಿದೆ. ಈಗಾಗಲೇ ನಾನು ಹೇಳಿದ ಪ್ರಕಾರ ನೇರವಾಗಿ ನಮ್ಮಿಂದ ಹೋಗುವ ಹಣ ಬಹಳ ಕಡಿಮೆ, ೧ ಕೋಟಿ ೮೩ ಲಕ್ಷ ರೂಪಾಯಿ ಇದ್ದರೂ ಕೂಡ ಇದಕ್ಕಿಂತ ಹೆಚ್ಚಿನ ಉಳಿತಾಯ ಮಾಡಿದ್ದೇವೆ. ನೇರವಾಗಿ ಹೋಗುವ ಹಣದಲ್ಲಿ ಮುಖ್ಯವಾಗಿರತಕ್ಕ ಕೆಲವು ಅಂಶಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ. ಪೀಪಲ್ಸ್ ಹೌಸಿಂಗ್ ಸ್ಕೀಂ ಗೆ ಇರುವ ೭೫ ಲಕ್ಷದ ಬಗ್ಗೆ ಚರ್ಚೆಯಾಯಿತು ಇದನ್ನು ಹೊಸದಾಗಿ ಕೇಳುತ್ತಾ ಇಲ್ಲ. ಈಗಾಗಲೇ ಹೇಳಿದ ಪ್ರಕಾರ, ಈ ಯೋಜನೆ ಪ್ರಾರಂಭವಾದಾಗ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿರತಕ್ಕ ಕಾರ್ಯಕ್ರಮವನ್ನು ನಾವು ಕಮ್ಯುನಿಟಿ ಡೆವಲಪಮೆಂಟ್‌ಗೆ ಸೇರಿಸಿದ್ದೇವೆ. ಆದಕಾರಣ ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಅದನ್ನು ಸೇರಿಸಬೇಕಾಗಿತ್ತು. Assistance for educated unemployed half a million job scheme ನಮ್ಮ ರಾಜ್ಯಕ್ಕೆ ಸಂಬಂಧಪಟ್ಟುದು ೭೭ ಲಕ್ಷದಲ್ಲಿ ಸೇರಿದೆ, ನಾವು ಕೊಡುತ್ತಾ ಇಲ್ಲ. ಅದಕ್ಕೆ ಸೆಂಟ್ರಲ್ ಅಸಿಸ್ಟೆನ್ಸ್ ನೇರವಾಗಿ ನಮಗೆ ಸಿಕ್ಕುತ್ತಾ ಇದೆ. ಆದರೂ ಕೂಡ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಇದನ್ನು ತೋರಿಸಬೇಕಾಗುತ್ತದೆ. ಅದೇ ರೀತಿ ೫೦ ಲಕ್ಷ ರೂ. ಅದು ಪೆನ್‌ಷನ್, ಓಲ್ಡೇಜ್ ಪೆನ್‌ಷನ್ ೩೦ ಲಕ್ಷ ರೂ. ಆಗುತ್ತದೆ, ಅದನ್ನೂ ಸೇರಿಸಿದೆ. ಇದನ್ನು ಸಭೆಯ ಗಮನಕ್ಕೆ ತರುತ್ತೇನೆ. ಇನ್ನು ಲೋಕಲ್ ಬಾಡೀಸ್ ಕೊಡುವ ಎಂಟ್‌ರಟೈನ್‌ಮೆಂಟ್ ಟ್ಯಾಕ್ಸ್ ೨೯ ಲಕ್ಷ ರೂಪಾಯಿ. ಈ ಅಂಶ ಕೂಡ ಸೇರಿದೆ.

ತಮಗೆ ಗೊತ್ತಿರುವಂತೆ ಎಂಟರ್‌ಟೈನಮೆಂಟ್ ಟ್ಯಾಕ್ಸ ಎಷ್ಟು ಬರುತ್ತದೆಯೋ ಅದರಲ್ಲಿ ಒಂದು ಭಾಗ ಲೋಕಲ್ ಬಾಡಿಗೆ ಕೊಡಬೇಕಾಗುತ್ತದೆ. ಎಂಟರ್‌ಟೈನಮೆಂಟ್ ಟ್ಯಾಕ್ಸ ಈ ವರ್ಷ ನಿರೀಕ್ಷೆ ಮಾಡಿರುವುದಕ್ಕಿಂತ ಜಾಸ್ತಿ ಬಂದಿರುವುದರಿಂದ ಅದರ ಪರಿಣಾಮವಾಗಿ ಲೋಕಲ್ ಬಾಡಿಗೆ ನಾವು ಏನು ಕೊಡುತ್ತೇವೆಯೋ ಅದನ್ನು ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಸೇರಿಸಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ನೋಡಲಿಕ್ಕೆ ಬಹಳ ದೊಡ್ಡ ಅಂಕಿಸಂಖ್ಯೆಗಳಿಂದ ಕೂಡಿದ್ದರೂ, ನೆಟ್ ಔಟ್ ಗೋ ಹೆಚ್ಚಿಲ್ಲ. ಇದು ಬಹಳ ಮಟ್ಟಿಗೆ ವೇಸಮಿನ್ಸ್‌ಗೆ ಸಂಬಂಧಪಟ್ಟಿದೆ. ರಿಸರ್ವ್ ಬ್ಯಾಂಕಿನ ಜೊತೆಗೆ ದಿನಂಪ್ರತಿ ಮಾಡುವ ವ್ಯವಹಾರಕ್ಕೆ ಸಂಬಂಧಪಟ್ಟಿದೆ, ಅದು ಈ ಸಪ್ಲಿಮೆಂಟರಿ ಡಿಮ್ಯಾಂಡ್ಸನಲ್ಲಿ ಪ್ರತಿಬಿಂಬಿಸಿದೇಯೇ. ಈ ಚರ್ಚೆಯಲ್ಲಿ ಭಾಗವಹಿಸುವಾಗ ಕೆಲವು ಮಾನ್ಯ ಸದಸ್ಯರು ಎತ್ತಿದ ಟೀಕೆಗಳಿಗೆ ನಾನು ಉತ್ತರ ಕೊಡಬೇಕಾದ್ದು ಇಲ್ಲ. ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ಆದರೂ ಕೂಡ ಅರೇಕಾನಟ್ ಮಾರ್ಕೆಟಿಂಗ್ ಮತ್ತು ಪ್ರೊಸೆಸಿಂಗ್ ಸೊಸೈಟಿ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ದೀರ್ಘವಾದ ಭಾಷಣ ಮಾಡಿದರು. ಅವರು ಹೇಳಿದ ನಂತರ ಕಕ್ಕಿಲಾಯನವರು ಬಹಳ ದಕ್ಷತೆಯಿಂದ ಅದಕ್ಕೆ ಉತ್ತರ ಕೊಟ್ಟರು. ಇದರಲ್ಲಿ ಇರುವ ಮುಖ್ಯ ಅಂಶ ಏನೆಂದರೆ ಎರಡು ರಾಜ್ಯಗಳಿಗೂ ಸಂಬಂಧಪಟ್ಟಿದ್ದು, ಮಾನ್ಯ ಕೆ. ಎಚ್. ಪಾಟೀಲರು ಸುದೈವದಿಂದ ಇಲ್ಲಿ ಇದ್ದಾರೆ. ನಾನು ಅದರ ಬಗ್ಗೆ ಹೆಚ್ಚು ಹೇಳಬೇಕಾದ್ದು ಇಲ್ಲ. ಅಗ್ರಿಕಲ್ಚರ್ ಡಿಮ್ಯಾಂಡ್ಸ ಬಂದಾಗ ಖಂಡಿತವಾಗಿ ಈ ವಿಷಯವನ್ನು ಮಾನ್ಯ ಸದಸ್ಯರು ಛತ್ತಿಯೇ ಎತ್ತುತ್ತಾರೆ. ಆಗ ಮಾನ್ಯ ಮಂತ್ರಿಗಳು ಅದಕ್ಕೆ ಸರಿಯಾದ ಉತ್ತರವನ್ನು ಇಲ್ಲಿಯೇ ಹೇಳುತ್ತಾರೆ. ಇದು ಕೇರಳ ಮತ್ತು ಕರ್ನಾಟಕಕ್ಕೆ ಸಂಬಂಧಪಟ್ಟದ್ದು. ಅವರು ೩೭ ಲಕ್ಷ ರೂಪಾಯಿಗಳನ್ನು ಸೊಸೈಟಿಗೆ ಕೊಟ್ಟಿದ್ದಾರೆ, ನಾವು ೩೭ ಲಕ್ಷ ರೂಪಾಯಿಗಳನ್ನು ಸೊಸೈಟಿಗೆ ಕೊಟ್ಟಿದ್ದೇವೆ. ಈ ಸೊಸೈಟಿಯ ಉದ್ದೇಶ ಅರೇಕಾ ಬೆಳೆಯುವವರಿಗೆ ಸರಿಯಾದ ಬೆಲೆ ಸಿಕ್ಕಿಲ್ಲ ಮತ್ತು ಅದನ್ನು ಪ್ರೊಸೆಸ್ ಮಾಡಬೇಕು ಎಂಬುದು, ಇದಕ್ಕಾಗಿ ಎರಡು ರಾಜ್ಯಗಳು ಸೇರಿ ಈ ಸೊಸೈಟಿಯನ್ನು ಮಾಡಿರತಕ್ಕದ್ದು. ಶಿವಮೊಗ್ಗದಲ್ಲಿ ಇರತಕ್ಕ ಸಂಸ್ಥೆಗಳಿಗೆ ಎಷ್ಟರಮಟ್ಟಿಗೆ ಪ್ರೋತ್ಸಾಹ ಕೊಡಬೇಕು ಅಥವಾ ಬಿಡಬೇಕು ಅದರ ಬಗ್ಗೆ ನಾನು ಈ ಸಂದರ್ಭದಲ್ಲಿ ಉತ್ತರ ಹೇಳುವ ಪರಿಸ್ಥಿತಿಯಲ್ಲಿ ಇಲ್ಲ, ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :—ಕೊಟ್ಟ ಹಣ ಸುಭದ್ರವಾಗಿ ಇರಬೇಕು ಅಷ್ಟೇ.

ಶ್ರೀ ಎಂ. ವೈ. ಘೋರ್ಪಡೆ :—ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಇಂತಹ ಸೊಸೈಟಿ ಇರಬೇಕು, ಇಲ್ಲದೇ ಹೋದರೆ ಸರಿಯಾದ ಬೆಲೆ ಕೊಡಲಿಕ್ಕೆ ಆಗುವುದಿಲ್ಲ. ಪ್ರೊಸೆಸಿಂಗ್ ಮಾಡಲಿಕ್ಕೆ ಆಗುವುದಿಲ್ಲ ಮತ್ತು ಸರಿಯಾಗಿ ಕಲ್ಟಿವೇಷನ್ ಮಾಡಲಿಕ್ಕೆ ಆಗುವುದಿಲ್ಲ, ಆದುದರಿಂದ ಈ ರೀತಿ ಕಮಾಡಿಟಿ ಕಾರ್ಪೊರೇಷನ್ ಇರಬೇಕು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :—It is a principle, ಕೋ ಆಪರೇಟಿವ್ ಮಾರ್ಕೆಟಿಂಗ್ ಅರೇಕನಟ್ ಸೇಲ್ಸ್ ಫೆಡರೇಷನ್ ಲಿಮಿಟೆಡ್ ಎಂದು ಈಗ ಇರುವುದು. ಹಿಂದೆ ಇದ್ದಂತಹ ಸೊಸೈಟಿಯವರು ಪರ್‌ಚೇಸ್ ಮಾಡುವುದಕ್ಕೆ ಕೂಡ ಬೈ ಲಾ ಮಾಡಿಕೊಂಡರೆ ಸಾಕಾಗುತ್ತಿತ್ತು. ಎರಡು ರಾಜ್ಯಗಳು ಸೇರಿ ಫೆಡರೇಷನ್ ಆಗಬೇಕು ಎಂದು ಮತ್ತು ಎರಡು ರಾಜ್ಯಗಳು ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ೧೯೭೩ ರಲ್ಲಿ ತೀರ್ಮಾನವಾಗಿದೆ. ಇದನ್ನು ತಾವು ನೋಡಲಿಲ್ಲವೇ ?

ಶ್ರೀ ಎಂ. ವೈ ಘೋರ್ಪಡೆ :—ಆ ತೀರ್ಮಾನವಾದ ನಂತರ ಅದರ ಬಗ್ಗೆ ತಕ್ಕ ಕಾರ್ಯಕ್ರಮ ಕೈಗೊಳ್ಳಲಿಲ್ಲ. ಅರೇಕಾ ಗ್ರೋಯರ್ಸ್ ಫೆಡರೇಷನ್ ಮಾಡಿ ಹಣ ಕೊಡಿಸಿದ ಮೇಲೆ ಕೇರಳ ಮತ್ತು ಕರ್ನಾಟಕದ ರಾಜ್ಯದವರು ಅದಕ್ಕೆ ಹಣ ಕೊಟ್ಟಿದ್ದಾರೆ. ಇದಕ್ಕಿಂತ ಹೆಚ್ಚಿನ ಹಣ ಬೇಕೆಂದು ಎನ್. ಸಿ. ಡಿ. ಸಿ. ಅವರ ಜೊತೆಗೆ ಮಾತನಾಡಿದರೆ ಇನ್ನೂ ಹೆಚ್ಚಿನ ಹಣ ಸಿಗುತ್ತದೆ. ಈ ಸೊಸೈಟಿಯವರು ಸಹ ಫೆಡರೇಷನ್ ಜೊತೆಗೆ ಸೇರಿಕೊಂಡು ಕೆಲಸ ಮಾಡುವುದಕ್ಕೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :—ಬೆಳೆಗಾರರು ೨೫ ಲಕ್ಷ ರೂಪಾಯಿ ಷೇರು ಕ್ಯಾಪಿಟಲ್ ಸಂಗ್ರಹಣ ಮಾಡಿದ್ದಾರೆ. ಅದೇ ರೀತಿ ಈ ಸೊಸೈಟಿಗೂ ಸಂಗ್ರಹಣೆ ಮಾಡಬಹುದಿತ್ತು.

ಶ್ರೀ ಕೆ. ಎಚ್. ಪಾಟೀಲ :—ಸರ್ಕಾರದವರು ಮಾಡಲಿಲ್ಲ, ಜನರೇ ಸಂಗ್ರಹಣೆ ಮಾಡಿದ್ದಾರೆ, ಜನರೇ ಸಂಗ್ರಹಣೆ ಮಾಡಿದ ಮೇಲೆ ಸರಕಾರದವರು ಕೊಟ್ಟಿದ್ದಾರೆ. ಅದೇ ರೀತಿ ಮಾನ್ಯ ಕಾಗೋಡು ತಿಮ್ಮಪ್ಪನವರು ಸಂಗ್ರಹಣೆಮಾಡಿ ಇನ್ನು ಒಂದು ಸೊಸೈಟಿ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ನೀವು ಸುರುಮಾಡುವಾಗ ನಮಗೆ ಇನ್‌ವಿಟೇಷನ್ ಕೂಡ ಕೊಡಲಿಲ್ಲ, ನಿಮ್ಮ ಪಾರ್ಟಿಯವರನ್ನೇ ಸೇರಿಸಿ ಮಾಡಿದ್ದೀರಿ, ಇದು ರಾಜಕೀಯ ಕುತಂತ್ರ. ಮಾನ್ಯ ಕೆ. ಎಚ್. ಪಾಟೀಲರು ೧೦ ಪ್ರೋಸೆಸಿಂಗ್ ಸೊಸೈಟಿಗಳನ್ನು ಮಾಡಿದರು. ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್ :—ನಿಮ್ಮ ಕೈ ಬಲ ಪಡಿಸುವುದಕ್ಕೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :—ನನ್ನ ಶಕ್ತಿಯಮೇಲೆ ನಾನು ನಿಂತಿದ್ದೇನೆ. ಈಗ ಷೇರು ಬಂಡವಾಳ ಸಂಗ್ರಹಣೆ ಮಾಡಿದ ಹಾಗೆ ೨೫ ಲಕ್ಷ ರೂಪಾಯಿಗಳನ್ನು ಹಿಂದೆ ಮಾಡಿದ ಫೆಡರೇಷನ್ನಿಗೂ ಸಂಗ್ರಹಣೆ ಮಾಡಬಹುದಾಗಿತ್ತು. ನೀವು ಕೊಡುವ ಷೇರು ಬಂಡವಾಳ ಅದಕ್ಕೆ ಕೊಟ್ಟಿದ್ದರೆ ಅದನ್ನು ಮಾಡುಬಹುದು ಇತ್ತು.

ಶ್ರೀ ಕೆ. ಎಚ್. ಪಾಟೀಲ್ :—ಅವರು ಮುಂದೆ ಬಂದರೆ ಅವರಿಗೂ ಕೊಡುತ್ತೇವೆ. ಕೋ ಆಪರೇಟಿವ್ಸ್ ಎಲ್ಲಿಯತನಕ ಲೈಫಿನಲ್ಲಿ ಇರುತ್ತದೆಯೋ ಅಲ್ಲಿಯತನಕ ಯಾವುದೇ ಸೊಸೈಟಿ ಮುಂದೆ ಬಂದರೆ ಮ್ಯಾಚಿಂಗ್ ಗ್ರಾಂಟ್ ಕೊಡುತ್ತೇವೆ. ಅದು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಮಲಗಿ ಕೊಂಡಿದೆ. ಅಡಿಕೆ ಬೆಲೆ ಬಿದ್ದು ಹೋದಾಗ ಆ ಸೊಸೈಟಿ ಜೀವಂತ ಇದ್ದು ಕೆಲಸ ಮಾಡಿದ್ದರೆ ಈ ತೊಂದರೆ ಬರುತ್ತಾ ಇರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಸರ್ಕಾರಕ್ಕೆ ಹಣ ಕೊಡಿರಿ ಎಂದು ನಮಸ್ಕಾರ ಹೊಡೆದರೂ ಹಣ ಕೊಡಲಿಲ್ಲ.

ಶ್ರೀ ಕೆ. ಎಚ್ ಪಾಟೀಲ್ :—ಹೊಸದಾಗಿ ಮಾಡಿದ ಫೆಡರೇಷನ್ನೊಳಗೆ ಎಲ್ಲಾ ಕಾಂಗ್ರೆಸ್ ಆರ್ ಪಾರ್ಟಿಗಳೇ ಇದ್ದಾರೆ ಎಂದು ಹೇಳಿದರು ತಮ್ಮ ಕಡೆ ಪುಡಾರಿಗಳೇ ಇದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ : ಈ ಸಪ್ಲಿಮೆಂಟರಿ ಡಿಮ್ಯಾಂಡ್ ಚರ್ಚೆ ಮಾಡುವಾಗ ಇಂತಹ ವಿಷಯಗಳನ್ನು ಚರ್ಚೆ ಮಾಡದೇ ಇರುವುದು ಒಳ್ಳೆಯದು. ಜನರಲ್ ಡಿಮ್ಯಾಂಡ್ಸ್‌ಮೇಲೆ ಸಮಾಧಾನ ಆಗುವ ರೀತಿಯಲ್ಲಿ ಇಂತಹ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯ. ಇನ್ನು ಮಾನ್ಯ ಕಕ್ಕಿಲಾಯಿ

ರವರು ಆಸ್ಪತ್ರೆ ಬಗ್ಗೆ ಒಂದು ಮಾತು ಹೇಳಿದರು ನಾನು ಒಂದು ಮಾತು ಸ್ಪಷ್ಟವಾಗಿ ಹೇಳುತ್ತೇನೆ. ಆಸ್ಪತ್ರೆ ನೌಕರರ ಸಂಬಳವಾಗಲಿ. ಅಲ್ಲಿಗೆ ಬೇಕಾದ ಸಪ್ಲೈಸ್ ಆಗಲಿ ಯಾವ ಕಾಲಕ್ಕೂ ಹಣ ಕಾಸಿನ ದೃಷ್ಟಿಯಿಂದ ನಿಲ್ಲಿಸಿಲ್ಲ. ನಿಲ್ಲಿಸಿದ್ದರೆ ಸ್ಥಳೀಯ ಸಮಸ್ಯೆಗಳ ಕಾರಣದಿಂದ ನಿಲ್ಲಿಸಿರಬಹುದು, ಅದರ ವಿಷಯ ಸರಿಯಾಗಿ ತಿಳಿಸಿದರೆ ಅದನ್ನು ಖಂಡಿತವಾಗಿ ನೋಡಿಸುತ್ತೇನೆ. ಇದು ಎಸನ್‌ಸಿಯಲ್ ಸರವೀಸಸ್ ಇರುವುದರಿಂದ ಅಲ್ಲಿಗೆ ಬೇಕಾದ ಸಪ್ಲೈಸ್ ಮತ್ತು ಅಲ್ಲಿಗೆ ಕೊಡಬೇಕಾದ ಸಂಬಳವನ್ನು ಯಾವ ಕಾಲಕ್ಕೂ ಮುಂದೆ ಹಾಕಿ ಎಂದು ಇನ್‌ಸ್ಟ್ರಕನ್ಸ್ ಸರ್ಕಾರದವರು ಕೊಟ್ಟಿಲ್ಲ ಎಂದು ಸ್ಪಸ್ಟವಾಗಿ ಹೇಳುತ್ತೇನೆ.

Mr. Deputy SPEAKER : I will put the demands to the vote of the House.

The question is :

> "That further sums not exceeding the amounts as shown in respect of Demand Nos. 3, 6, 10, 13, 16, 18, 20A, 23, 24, 24A, 25, 27, 30B, 34, 38, 39, 40, 41, 44, 45, 46, 48, 52 and 54 be granted to Government to defray the charges which will come in course of payment during the financial year ending with 31st day of March 1974."

The Motion was Adopted and the Demands was Granted.

As Order by the Chair the Demands for granting adopted by the House are reproduced below :—

1. That a further sum not exceeding Rs. 7,90,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'State Excise'.

2. That a further sum not exceeding Rs. 30,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Other Taxes-Administration'.

3. That a further sum not exceeding Rs. 100 be granted out of the Consoledated Fund of the State to defray the charges which will come in course of payment during the year ending the 31st day of March 1974, in respect of 'General Administration excluding Treasuries and Local Fund Audit'.

4. That a further sum not exceeding Rs. 100 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Police'.

5. That a further sum not exceeding Rs. 12,50,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Scientific Departments'.

6. That a further sum not exceeding Rs. 100 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Medical, Public Health and Family Planning'.

7. That a further sum not exceeding Rs. 100 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Fisheries'.

8. That a further sum not exceeding Rs. 200 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Co-operation'.

9. That a further sum not exceeding Rs. 200 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Industries (excluding Sericulture)'.

10. That a further sum not exceeding Rs. 69,56,000 be granted out of the Consolidated Fund of the State to defary the charges which will come in course of payment during the year ending the 31st day of March 1974, in respect of 'Sericulture'.

11. That a further sum not exceeding Rs. 74,50,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of 'Community Development etc'.

12. That a further sum not exceeding Rs. 76,54,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of "Miscellaneous Social and Developmental Organisations".

13. That a further sum not exceeding Rs. 500 be granted out of the Consolidated Fund of the State to defary the charges which will come in cource of payment during the year ending the 31st day of March 1974, in respect of "Capital Outlay on Irrigation etc. (within the Revenue Account)".

14. That a further sum not exceeding Rs. 50,00,000 be granted out of Consolidated Fund of the State to defary the charges which will come in course of payment during the year ending the 31st day of March 1974, in respect of "Pensions and Other Retirement Benefits".

15. That a further sum not exceeding Rs. 100 be granted out of the Consolidated Fund of the State to defray the charges which will

come in course of payment during the year ending the 31st day of March 1974, in respect of " Forest ".

16. That a further sum not exceeding Rs. 100 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of " Miscellaneous ".

17. That a further sum not exceeding Rs. 15,00,000 be granted out of the the Consolidated Fund of the State to defray the charges which will come in course of payment during the year ending the 31st day of March 1974, in respect of " Commutation of Pensions ".

18. That a further sum not exceeding Rs. 29,45,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of " Miscellaneous Compensations and Assignments ".

19. That a further sum not exceeding Rs. 1,300 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of " Capital Outlay on Industrial and Economic Development ".

20. That a further sum not exceeding Rs. 900 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of " Capital Outlay on Irrigation etc., (Commercial)".

21. That a further sum not exceeding Rs. 600 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of "Capital Outlay on Irrigation etc. (Non-Commercial)".

22. That a further sum not exceeding Rs. 400 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of "Capital Outlay on Public Works".

23. That a further sum not exceeding Rs. 15,00,000 be granted out of the Consolidated Fund of the State to defray the charges which will come in course of payment during the year ending the 31st day of March 1974, in respect of "Commuted Value of Pensions".

24. That a further sum not exceeding Rs. 9,11,01,589 be granted out of the Consolidated Fund of the State to defray the charges

which will come in course of payment during the year ending the 31st day of March 1974, in respect of "Advances and Loans"

DEMANDS FOR GRANTS TO COVER EXCESS EXPENDITURE DURING 1968—69

Demand Nos. 8, 21, 23, 29, 30-A, 33, 42, 43, 45, 46, 53 and 54.

Mr. Deputy SPEAKER.—The Hon. Minister for Finance will move the next item on the Agenda.

Sri M. Y. GHORPADE.—I move.

"That the sum of Rs. 1,98,934 be granted to cover the expenditure incurred in excess of voted grants for the year 1968-69 in respect of Demand No. 8 Registration".

Mr. Deputy SPEAKER.—Motion moved.

"That the sum of Rs. 1,98,934 be granted to cover the expenditure incurred in excess of voted grants for the year 1968-69 in respect of Demand No. 8 Registration".

Along with this Demand the other Demands *viz*. 21, 23, 29, 30-A, 33, 42, 43, 45, 46, 53 and 54 are deemed to have been moved.

ಶ್ರೀ ಎಂ. ವೈ. ಘೋರ್ಪಡೆ:—ಇದರ ಮೇಲೆ ಭಾಷಣ ಮಾಡಬೇಕಾದ್ದು ಇಲ್ಲ. ಪ್ರತಿವರ್ಷ ಎಷ್ಟು ಎಕ್ಸೆಸ್ ಆಗಿದೆ ಎಂಬುದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರನ್ನು ಪ್ರಾರ್ಥನೆ ಮಾಡಿ ಸಭೆಯ ಮುಂದೆ ತಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:—ಒಂದು ವಿಶಾದಕರವಾದ ಸಂಗತಿ ಏನಂದರೆ ೧೯೬೮-೬೯ ನೇ ಇಸ್ವಿಗೆ ಸಂಬಂಧಪಟ್ಟ ಲೆಕ್ಕವನ್ನು ಒಪ್ಪಿಗೆ ಪಡೆಯುವುದಕ್ಕೆ ಈಗ ಸರ್ಕಾರದವರು ತಂದಿರತಕ್ಕದ್ದು ಇದು ಸಮಂಜಸವಾದ ಕ್ರಮವಲ್ಲ. ಅಕಸ್ಮಾತ್ ಆಯಾಯಾ ವರ್ಷಗಳಲ್ಲಿ ಕಷ್ಟಪಟ್ಟರೂ ಇದನ್ನು ಇಡುವುದಕ್ಕೆ ಆಗದಿದ್ದರೆ ಅದರ ಮುಂದಿನ ವರ್ಷವಾದರೂ ಇಟ್ಟು ಒಪ್ಪಿಗೆಯನ್ನು ಪಡೆಯಬೇಕು. ಈ ರೀತಿ ಮಾಡುವುದರಿಂದ ಈ ಸದನಕ್ಕೆ ಆಗಲೀ, ಸರ್ಕಾರಕ್ಕೆ ಆಗಲೀ ಗೌರವ ಉಳಿಯುವುದಕ್ಕೆ ಆಗುವುದಿಲ್ಲ. ಇದರಿಂದ ಸರ್ಕಾರದ ಆಡಳಿತ ಯಂತ್ರ ಎಷ್ಟು ಚೆನ್ನಾಗಿ ನಡೆಯುತ್ತಿದೆಂದು ಹೇಳಿದಂತಾಗುತ್ತದೆ. ಆಡಳಿತ ಯಂತ್ರ ಸರಿಯಾಗಿದ್ದರೆ ಆಯಾಯಾ ವರ್ಷಕ್ಕೆ ಖರ್ಚು ಆದಂಥ ದುಡ್ಡನ್ನು ಬರತಕ್ಕ ಮುಂದಿನ ವರ್ಷದ ಅವಧಿಯೊಳಗೆ ಒಪ್ಪಿಗೆ ಪಡೆಯುವುದಕ್ಕೆ ಆಗುತ್ತದೆ. ಆಡಳಿತ ಯಂತ್ರ ಸರಿಯಾಗಿ ಇಲ್ಲದೇ ಇರುವುದರಿಂದ ೩-೪ ವರ್ಷಗಳ ಹಿಂದಿನ ಲೆಕ್ಕವನ್ನು ಈಗ ಒಪ್ಪಿಗೆ ಪಡೆಯುವುದಕ್ಕೆ ಬರುತ್ತಿದೆ. ಇದನ್ನು ಸರಿಪಡಿಸುವುದು ಯಾವಾಗ ? ಕಳೆದ ೧೯೭೩-೭೪ ರ ಸಾಲಿಗೆ ಸಂಬಂಧಪಟ್ಟ ಆಯವ್ಯಯವನ್ನು ಎರಡು ಕಂತುಗಳಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ತಂದು ಒಪ್ಪಿಗೆ ಪಡೆದಿರಿ. ಇದು ಆಗಬಾರದು. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಒಂದಕ್ಕಿಂತ ಜಾಸ್ತಿ ಹಾಕಬಾರದು. ನಿಮ್ಮ ಆಡಳಿತ ಯಂತ್ರದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮಗಳು ಏನು ? ಕಾರ್ಯಗತ ಮಾಡಬೇಕಾದಂಥ ಹಣ ಎಷ್ಟು ಎನ್ನುವುದನ್ನು ನಿಖರವಾಗಿ ನಿಮ್ಮ ಯೋಜನೆಯಲ್ಲಿ ರೂಪಿಸಿಕೊಂಡಿರುವುದಿಲ್ಲ. ಪೂರ್ವಭಾವಿ ಸಿದ್ಧತೆ ಇಲ್ಲದಿರುವುದರಿಂದಲೇ ಇಷ್ಟೊಂದು ಗೊಂದಲ ಆಗುವುದಕ್ಕೆ ಕಾರಣವಾಗಿದೆ. ಆಡಳಿತ ಯಂತ್ರಕ್ಕೆ ಎಚ್ಚರಿಕೆ ನೀಡಿ ನಿಮ್ಮ ಎಫಿಷಿಯನ್ಸಿಯನ್ನು ಜಾಸ್ತಿ ಮಾಡುತ್ತಾ ಹೋಗಿ. ಈ ಕೆಟ್ಟ ಪರಿಪಾಠವನ್ನು ತಪ್ಪಿಸುವುದಕ್ಕೆ ಪ್ರಯತ್ನ ಪಡಬೇಕೆಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ.